ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ.

ಅಭಿಯಾಚನೆ ಕ್ರಮಾಂಕ 32-ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳು ಬಿಟ್ಟು)

ಶ್ರೀ ಕೆ.ಜೆ. ಜಾರ್ಜ್ : (ವಸತಿ ಮತ್ತು ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹ ನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 23,24,25,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,83,55,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 33 - ನಗರಾಭಿವೃದ್ಧಿ ಇತ್ಯಾದಿ.

ಶ್ರೀ ಕೆ.ಜೆ. ಜಾರ್ಜ್ : (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 38,04,60,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,87,93,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 34 - ನಗರಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳು

ಶ್ರೀ ಕೆ.ಜೆ. ಜಾರ್ಜ್ : (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-92ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಪಾಲಿಕೆಗಳಿಗೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 75,60,15,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಈ ಬೇಡಿಕೆಗಳಿಗೆ ಸಂಬಂಧಪಟ್ಟಹಾಗೆ ಏನು ಬೇಕಾದರೂ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಕಳಕಳಿಯ. ಮನವಿ ಮಾಡುತ್ತಿದ್ದೇನೆ. ಈ ಬೇಡಿಕೆ ಇವತ್ತು, ನಾಳೆ, ನಾಳಿದ್ದು ಮುಂದುವರಿಯುತ್ತದೆ. ಆದರೆ ಬಹಳ ಗಂಭೀರವಾದ ವಿಷಯವೆಂದರೆ..

ಅಧ್ಯಕ್ಷರು : ಅದು ಕೋರ್ಟ್ ಮುಂದೆ ಇದೆ. ಅದರ ಬಗ್ಗೆ ನಾವೇನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆ ಸದನದಲ್ಲಿ ಈ ಬಗ್ಗೆ ಇವತ್ತು ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು : ಆ ಸದನದಲ್ಲಿ ಏನು ಬೇಕಾದರೂ ಮಾಡಬಹುದು. ಈ ಸದನದಲ್ಲಿ ನಾನು ಅವಕಾಶ ಕೊಡುವುದಿಲ್ಲ, ಆ ವಿಷಯ ಮಾನ್ಯ ಮಂತ್ರಿಗಳಿಗೆ ಸಂಬಂಧಿಸಿದ್ದಲ್ಲ ಹಾಗೂ ಅದು ಕೋರ್ಟ್ ಮುಂದೆ ಇದೆ.ಈಗ ತಾವು ಕುಳಿತುಕೊಳ್ಳಿ. ಮಾನ್ಯ ದೇಶಪಾಂಡೆಯವರು ಡಿಮಾಂಡ್ ಮೇಲೆ ಚರ್ಚೆ ಪ್ರಾರಂಭಿಸಲಿ.

ಶ್ರೀ ವಾಟಾಳ್ ನಾಗರಾಜ್ : ಅತ್ಯಂತ ಗಂಭೀರವಾದ ಪರಿಸ್ಥಿತಿ.

ಅಧ್ಯಕ್ಷರು : ಕಾರ್ಪೊರೇಷನ್‌ನ ನಿರ್ಣಯಕ್ಕೆ ಹೈಕೋರ್ಟ್ ಸ್ಟೇ ನೀಡಿದೆ. ಕೋರ್ಟ್ ಮುಂದೆ ಇರುವುದರಿಂದ ಸದನ ಏನು ಮಾಡುವುದಕ್ಕೂ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಹೈಕೋರ್ಟ್ ಪ್ರಶ್ನೆ ಮಾಡುವುದಿಲ್ಲ. ಈ ಬಗ್ಗೆ ಸರ್ಕಾರದ ನಿರ್ಧಾರ ಏನು ಎನ್ನುವುದನ್ನು ಹೇಳಲಿ.

ಅಧ್ಯಕ್ಷರು : ಸರ್ಕಾರಕ್ಕೂ ಇದಕ್ಕೂ ಸಂಬಂಧವಿಲ್ಲ. ಕೋರ್ಟ್ ಮತ್ತು ಕಾರ್ಪೊರೇಷನ್ ಮಧ್ಯೆ ಇರತಕ್ಕ ಸಮಸ್ಯೆ ಇದು.

ಶ್ರೀ ವಾಟಾಳ್ ನಾಗರಾಜ್ : ಕೋರ್ಟ್‌ನ ವಿರುದ್ಧ ನಾವು ಮಾತನಾಡುತ್ತಿಲ್ಲ.

ಅಧ್ಯಕ್ಷರು : ಕಾರ್ಪೊರೇಷನ್ ಮತ್ತು ಹೈಕೋರ್ಟ್‌ಗಳ ಮಧ್ಯೆ ಸೀಮಿತ ಇರುವ ಸಮಸ್ಯೆ ಇದು. ಈ ಸದನಕ್ಕೆ ಅದು ಸಂಬಂಧ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಅಜೀಜ್ ಸೇಟ್ ಅವರು ಒಂದು ಮಾತನ್ನು ಹೇಳಿದರು.

ಅಧ್ಯಕ್ಷರು : ಅಜೀಜ್ ಸೇಠ್ ಅವರು ಏನು ಬೇಕಾದರೂ ಹೇಳಬಹುದು.

The Chair is not bound by whatever Sri Azeez Sait or anybody else has said. We have a programme on hand and we should go according to the programme.

ಈಗ ವಿತ್ತೀಯ ಕಲಾಪಗಳು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಇದನ್ನು ವಿರೋಧ ಮಾಡುತ್ತಾ ಇಲ್ಲ, ಸರ್ಕಾರ ನಿರ್ಲಕ್ಷ್ಯ ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಯಾವುದೂ ಸರಿಯಿಲ್ಲ. ದೇಶಪಾಂಡೆಯವರೇ ನೀವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ನಾನು ಪ್ರತಿಭಟನೆ ಮಾಡುತ್ತೇನೆ.

ಅಧ್ಯಕ್ಷರು : ಅಗತ್ಯವಾಗಿ ಪ್ರತಿಭಟನೆ ಮಾಡಬಹುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಲ್ಲ ಸ್ವಾಮಿ, ಈ ವಿಚಾರ..

ಅಧ್ಯಕ್ಷರು : ಶಿವರಾಮೇಗೌಡರೇ, ನೀವು ಕಲಿಯಬೇಕಾದ್ದು ಇನ್ನೂ ಬಹಳ ಇದೆ. would you kindly resume your seat. ದಯವಿಟ್ಟು ತಾವು ಕುಳಿತುಕೊಳ್ಳಿ. ನಾನು ಮತ್ತೊಮ್ಮೆ ಸ್ಪಷ್ಟ ಮಾಡುತ್ತಿದ್ದೇನೆ. ಕಾರ್ಪೊರೇಷನ್ ಹಾಗೂ ಹೈಕೋರ್ಟ್ ನಡುವೆ ನಡೆಯುತ್ತಿರತಕ್ಕ ಸಮಸ್ಯೆ ಇದು. ಹೈಕೋರ್ಟ್ ಮುಂದೆ ಸ್ಟೇ ಆರ್ಡರ್ ಇದೆ. ಆದುದರಿಂದ ಸಬ್‌ಜುಡೀಸ್ ಆಗುವ ವಿಷಯವನ್ನು ಚರ್ಚೆ ಮಾಡೋಣ ಎಂದರೆ ಏನರ್ಥ? ಅದೂ ಅಲ್ಲದೇ ಏನಾದರೂ ನೀತಿ ಬಗ್ಗೆ ಹೇಳಬೇಕಾದರೆ

ಮುಂದೆ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯುವ ಸಮಯದಲ್ಲಿ ತಮ್ಮ ಸರದಿ ಬಂದಾಗ ತಾವು ಮಾತನಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಏನು ಹೇಳಿದೆನೋ ಅದೇ ಮಾನ್ಯ ಬನ್ನೀಕೋಡ್ ಅವರಿಗೂ ಅಪ್ಲೈ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಕೈಮುಗಿದು ಕೇಳುತ್ತಿದ್ದೇನೆ. ನನ್ನ ಮನಸ್ಸಿಗೆ ನೋವಾಗಿದೆ. ನಿಜವಾಗಿಯೂ ಕೋರ್ಟಿನ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಕಾರ್ಪೋರೇಷನ್..

ಅಧ್ಯಕ್ಷರು : ಈ ಡಿಮ್ಯಾಂಡ್‌ನಲ್ಲಿ ಕಾರ್ಪೋರೇಷನ್ ವಿಚಾರ ಡಿಸ್‌ಕಸ್ ಮಾಡಬಹುದು. ನಾನು ತಮ್ಮನ್ನು ಕರೆಯುತ್ತೇನೆ. ಈಗ ದೇಶಪಾಂಡೆಯವರು ಮಾತನಾಡಲಿ.

ಶ್ರೀ ಬಿ.ಹೆಚ್. ಬನ್ನೀಕೋಡ್ : ಮಾನ್ಯ ಅಧ್ಯಕ್ಷರೇ, ನನ್ನ ಜಿಲ್ಲೆಯ ಒಂದು ವಿಚಾರವನ್ನು ಬರೆದು ಕಳಿಸಿದ್ದೇನೆ. ದಯವಿಟ್ಟು ಮಂತ್ರಿಗಳಿಂದ ಹೇಳಿಕೆ ಕೊಡಿಸಬೇಕು.

ಅಧ್ಯಕ್ಷರು : ಬನ್ನೀಕೋಡ್ ಅವರೇ, ನೀವು ನಿಂತನಿಂತಾಗಲೆಲ್ಲ ನಾನು ಮಂತ್ರಿಗಳನ್ನು ಕರೆಯುತ್ತಾ ಹೋದರೆ ನಾನು ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದೇಶಪಾಂಡೆಯವರೇ, ತಾವು ಚರ್ಚೆ ಪ್ರಾರಂಭ ಮಾಡಿ.

1991-92ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಆರ್.ವಿ. ದೇಶಪಾಂಡೆ : (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಯ ಬೇಡಿಕೆಗಳ ಸಂಖ್ಯೆ 32, 33 ಮತ್ತು 34 ಇವುಗಳನ್ನು ಮಾನ್ಯ ಸಚಿವರು ಏನು ಮಂಡಿಸಿದ್ದಾರೆ, ಅದಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸಿ ಕೆಲವು ವಿಚಾರಗಳನ್ನು ಸದನದ ಮುಖಾಂತರ ಈ ನಾಡಿನ ಜನರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಕಳೆದ 1 ವರ್ಷ 8 ತಿಂಗಳಿನಲ್ಲಿ ಈ ಇಲಾಖೆಯಲ್ಲಿ ಯಾವುದೂ ಅಭಿವೃದ್ಧಿ ಕೆಲಸವಾಗಿಲ್ಲ. ಕುಡಿಯುವ ನೀರಿನ ಯೋಜನೆಯಾಗಲೀ, ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಆಡಳಿತ ಸುಧಾರಣೆಯ ವ್ಯವಸ್ಥೆಯಾಗಲೀ ಅಥವಾ ಬಡ ಜನರಿಗೆ ಈ ಇಲಾಖೆಯಿಂದ ಆಗುವ ಎಲ್ಲಾ ಕಾರ್ಯಕ್ರಮಗಳು ಸ್ಥಗಿತಗೊಂಡಿವೆ. ಕೇವಲ ಅರ್ಬನ್ ಸೀಲಿಂಗ್ ಆಕ್ಟ್, ಬಲ್ಕ್ ಅಲಾಟ್‌ಮೆಂಟ್, ಭೂ ಬದಲಾವಣೆ ಇದೇ ಒಂದು ಕಾನೂನಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಸರ್ಕಾರ ಈವೊಂದು ಅರ್ಬನ್ ಸೀಲಿಂಗ್‌ಗೆ ಪರ್ಮಿಶನ್ ಕೊಟ್ಟು ಚೇಂಜ್ ಆಫ್ ಲ್ಯಾಂಡ್ಸ್ ಮಾಡಿ ಸಾಕಷ್ಟು ಈ ಕಾಯಿದೆಗಳನ್ನು ದುರುಪಯೋಗ ಮಾಡುತ್ತಿದೆಯೇ ವಿನಹ ಸಾಮಾನ್ಯ ಜನರಿಗೆ ಯಾವುದೇ ಲಾಭ, ಯಾವುದೇ ಅಭಿವೃದ್ಧಿ ಆಗಿರುವುದು ಕಳೆದ ಒಂದು ವರ್ಷ 8 ತಿಂಗಳಿನಿಂದ ಕಂಡುಬರುತ್ತಿಲ್ಲ. ಇವತ್ತು ಈ ಇಲಾಖೆಯಿಂದ ಬಹಳ ದೊಡ್ಡ ಕಾರ್ಯಕ್ರಮಗಳು ಆಗಬೇಕು. ಮುಖ್ಯವಾಗಿ ಪಟ್ಟಣ ಪ್ರದೇಶಗಳಲ್ಲಿ ಬಡ ಜನರಿಗೆ ನಿವೇಶನಗಳನ್ನು ಕೊಡುವುದು, ಬಡ ಜನರಿಗೆ ಮನೆ ಕಟ್ಟಿಕೊಡುವುದು ಈ ಎರಡೂ ಕಾರ್ಯಕ್ರಮಗಳಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇವತ್ತು ಇವರದೇ ಆದ ಪರ್‌ಫಾರ್ಮೆನ್ಸ್, ನಮ್ಮ ಬಜೆಟ್‌ನಲ್ಲಿ 1991-92ರ ಪ್ರಕಾರ 1 ಲಕ್ಷದ 46 ಸಾವಿರದ 724 ಜನ ಪಟ್ಟಣ ಪ್ರದೇಶಗಳಲ್ಲಿ ಇವತ್ತು ಕಡು ಬಡವರು ಇದ್ದಾರೆ. ಅವರಿಗೆ

ನಿವೇಶನ ಇಲ್ಲ. ಇವರ ಪೈಕಿ ಕಳೆದ ಎರಡು ವರ್ಷಗಳಿಂದ ಒಬ್ಬರಿಗೂ ಸಹ ನಿವೇಶನ ಕೊಟ್ಟಿಲ್ಲ, ಅಷ್ಟೇ ಅಲ್ಲ, ಈವೊಂದು ನಿವೇಶನವನ್ನು ಕೊಡುವಾಗ ಸಬ್ಸಿಡೈಸ್ಡ್ ರೇಟಿನಲ್ಲಿ ಬಡಜನರಿಗೆ ಕೊಡಬೇಕೆಂದು ಸರ್ಕಾರದ ಕಾನೂನು ಇದೆ. ಕಳೆದ ಎರಡು ವರ್ಷಗಳಲ್ಲಿ 1990-91 ಮತ್ತು 1991-92ರಲ್ಲಿ ತಾವು ಯಾವುದೇ ಬಜೆಟ್ ಪ್ರಾವಿಜನ್ ಸಹ ಮಾಡಿಕೊಂಡಿಲ್ಲ. ಹಾಗಾದರೆ ಇದರಿಂದ ಬಹಳ ಸ್ಪಷ್ಟವಾಗಿ ಕಾಣಿಸುತ್ತಿದೆ, ಬಡ ಜನರಿಗೆ ಸಹಾಯ ಮಾಡುವ ಯಾವುದೇ ಚಿಂತನೆ ಸರ್ಕಾರದಲ್ಲಿ ಇಲ್ಲ, ಕೇವಲ ಪೊಳ್ಳು ಘೋಷಣೆಗಳನ್ನು ಮಾಡಿಕೊಂಡು, ತಾವು ಬಜೆಟ್ ಭಾಷಣದ ಮುಖಾಂತರ ಮತ್ತು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಈ ಸದನದಲ್ಲಿ ಹೇಳಿದ್ದೀರಿ. ಇವತ್ತು ಈ ರಾಜ್ಯದಲ್ಲಿ ನಿಮ್ಮ ಲೆಕ್ಕದ ಪ್ರಕಾರ 90 ಸಾವಿರ ಜನರಿಗೆ ಅರ್ಬನ್ ಏರಿಯಾದಲ್ಲಿ ನಿವೇಶನ ಸಿಗಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮುಖಾಂತರ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದು ಬಹಳ ಹಳೆಯ ಕಾಲದಲ್ಲಿ ಆದ ಸರ್ವೆ. ಇವೆಲ್ಲ ಹಳೆಯ ಫಿಗರ್ಸ್. ಆದ್ದರಿಂದ ಇವತ್ತು ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕಾದರೆ ಪುನಃ ಸರ್ವೆ ಮಾಡಿಸಬೇಕಾಗುತ್ತದೆ. ನನ್ನ ಅಂದಾಜಿನ ಪ್ರಕಾರ ಅರ್ಬನ್ ಏರಿಯಾದಲ್ಲಿ ಕನಿಷ್ಠ ಎರಡು ಲಕ್ಷ ಜನರಿಗೆ ನಿವೇಶನ ಇಲ್ಲ. ಎಲ್ಲಿಯತನಕ ಸರ್ಕಾರ ಈವೊಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಿಲ್ಲವೋ ಅಲ್ಲಿಯತನಕ ತಮ್ಮ ಭರವಸೆಗಳು ಕೇವಲ ಪುಸ್ತಕದಲ್ಲಿರುತ್ತದೆಯೇ ಹೊರತು ಅದರಿಂದ ಜನರಿಗೆ ಸಹಾಯವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಪ್ರಕಾರ ನೀವು ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಶತಮಾನೋತ್ಸವದ ವರ್ಷದಲ್ಲಿ 1 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ಏನು ಮಾಡಿದ್ದೀರಿ ?

(ಮಾನ್ಯ ಬಸವರಾಜ್ ಪಾಟೀಲ್ ಅಟ್ಟೂರ್‌ರವರು ಅಧ್ಯಕ್ಷ ಪೀಠದಲ್ಲಿದ್ದರು)

ಇವತ್ತಿನತನಕ ಒಂದು ಮನೆ ಕಟ್ಟಿದ್ದೂ ಕಂಡು ಬರುವುದಿಲ್ಲ. ಅಷ್ಟೇ ಅಲ್ಲ ಈ ಮನೆಗಳನ್ನು ಕಟ್ಟಲಿಕ್ಕೆ ಕಾರ್ಯಕ್ರಮಗಳೇ ಇಲ್ಲ. ಯಾವ ಬಡ ಜನರಿಗೆ ಮನೆಗಳನ್ನು ಕಟ್ಟಿ ಕೊಡುತ್ತೇವೆಂದು ಹೇಳುತ್ತೀರೋ ಅವರಿಗೆ ನಿವೇಶನ ಇಲ್ಲ. ಮನೆಗಳನ್ನು ಎಲ್ಲಿ ಕಟ್ಟಿಕೊಡುತ್ತೀರಿ? ಅದರ ಬಗ್ಗೆ ನಿಮ್ಮ ಬಜೆಟ್ ಪ್ರಾವಿಜನ್ ಏನು? ಹಾಗಾಗಿ ಇದು ಕೇವಲ ಪೊಳ್ಳು ಘೋಷಣೆಯಾಗಿದೆಯೇ ವಿನಹ, ಬಡ ಜನರಿಗೆ ನಿಜವಾಗಿ ಸೇವೆ ಮಾಡಬೇಕು, ಬಡ ಜನರ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ಚಿಂತನೆ ಸರ್ಕಾರದಲ್ಲಿಲ್ಲ.

12.00 ನೂನ್

ಇವತ್ತು ಸ್ಲಮ್ ಡ್ವೆಲ್ಲರ್ಸ್‌ಗೆ 60 ಸಾವಿರ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದೀರಿ, ಇದು ನಿಮ್ಮ ಬಜೆಟ್‌ನಲ್ಲಿರುವ ಕಾರ್ಯಕ್ರಮ. ಇದರ ಬಗ್ಗೆ ಏನು ಮಾಡಿದ್ದೀರಿ? ಇವತ್ತು ನಮ್ಮ ರಾಜ್ಯದಲ್ಲಿ ಏನು ಸ್ಲಮ್‌ಗಳು ಇವೆ, ಅವುಗಳಲ್ಲಿ 60 ಸಾವಿರ ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ಯಾವ್ಯಾವ ಸ್ಥಳಗಳಲ್ಲಿ ಹಾಕಿಕೊಂಡಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದು ನಿಮ್ಮ ಪರ್ಫಾರ್ಮೆನ್ಸ್ ಬಜೆಟ್‌ನಲ್ಲಿ ಎಲ್ಲೂ ಇಲ್ಲ. ಸ್ಲಮ್ ಬೋರ್ಡ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದೀರೇ ವಿನಹ, ಈ 60 ಸಾವಿರ ಮನೆಗಳನ್ನು ಎಲ್ಲಿ ಕಟ್ಟುತ್ತೀರಿ, ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದನ್ನೂ ಎಲ್ಲೂ ಸಹ ಸ್ಪಷ್ಟವಾಗಿ ಕಾಣಿಸಿಲ್ಲ. ಇವತ್ತು ನಿಮ್ಮ ಭಾಗ್ಯಮಂದಿರ ಯೋಜನೆ ಇದೆ. ಇದು ಒಂದು ಬಹಳ ದೊಡ್ಡ

ಜೋಕ್ ಆಗಿದೆ. ಏಕೆಂದರೆ ಒಂದೂ ಮನೆಯನ್ನು ಕಟ್ಟಿಲ್ಲ. ಇದಕ್ಕೆ ಕೆಲವು ತೊಂದರೆಗಳು ಇದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಯೂನಿಟ್ ಕಾಸ್ಟ್ ಹೆಚ್ಚಾಗಿದೆ. ಸಬ್ಸಿಡಿ ಕಾಂಪೋನೆಂಟ್ ಬಹಳ ಕಡಿಮೆಯಾಗಿದೆ. ಕೇವಲ ಒಂದು ಸಾವಿರ ಸಬ್ಸಿಡಿ ಕಾಂಪೊನೆಂಟ್ ಇದೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಿ ಇವತ್ತು ಭಾಗ್ಯ ಮಂದಿರ ಯೋಜನೆಯಲ್ಲೂ ಮನೆಗಳನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. 1990-91ರಲ್ಲಿ ಟಾರ್ಗೆಟ್ 3 ಸಾವಿರ ಇದ್ದರೆ ನೀವು ಕಟ್ಟಿರುವ ಮನೆಗಳು 550 ಮಾತ್ರ. ಅದೇ ಪ್ರಕಾರ ಹೌಸಿಂಗ್ ಬೋರ್ಡ್ ಬಗ್ಗೆ ತಾವು ಹೇಳಿದ್ದೀರಿ. ತಾವು 1990-91ರ ಬಜೆಟ್ ಭಾಷಣದಲ್ಲಿ ಹೌಸಿಂಗ್ ಬೋರ್ಡ್‌ನಿಂದ 12ಸಾವಿರ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಆದರೆ ಪರ್ಫಾರ್ಮೆನ್ಸ್ ಬಜೆಟ್‌ನಲ್ಲಿ ಏನು ಇದೆ. ಎಂದರೆ ಹೌಸಿಂಗ್ ಬೋರ್ಡ್‌ನಿಂದ ಆಗಿರುವುದು ಕೇವಲ ಆರೂವರೆ ಸಾವಿರ ಮನೆಗಳು ಮಾತ್ರ. 1990-91ರಲ್ಲಿ ಬಜೆಟ್ ಭಾಷಣದಲ್ಲಿ ಶ್ರೀಮಾನ್ ರಾಜಶೇಖರಮೂರ್ತಿಯವರು 12 ಸಾವಿರ ಮನೆಗಳನ್ನು ಹೌಸಿಂಗ್ ಬೋರ್ಡಿನಿಂದ ಕಟ್ಟುತ್ತೇವೆ ಎಂದು ಹೇಳಿದ್ದರು. ಅಷ್ಟೇ ಅಲ್ಲ, 12 ಸಾವಿರ ಮನೆಗಳನ್ನು ಕಟ್ಟುತ್ತೇವೆ ಮತ್ತು ಇದಕ್ಕೆ 3 ಕೋಟಿ 60 ಲಕ್ಷ ರೂಪಾಯಿಗಳನ್ನು ಪ್ರೊವಿಜನ್ ಮಾಡುತ್ತೇವೆ ಎಂದು ಹೇಳಿದ್ದರು. ಹಾಗಾದರೆ ಆ ಪ್ರೊವಿಜನ್ ಎಲ್ಲಿ ಹೋಯಿತು? ಆ ಹಣ ಎಲ್ಲಿದೆ? ಈ ಕಾರ್ಯಕ್ರಮವನ್ನು ಸರ್ಕಾರ ಏಕೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ? ಇವತ್ತು ನಿಮ್ಮ ಈ ಭಾಗ್ಯಮಂದಿರ ಯೋಜನೆ ಬಗ್ಗೆ ನನಗೆ ಗೊತ್ತು. ಇದರಲ್ಲಿ ಸಬ್ಸಿಡಿ ಕಾಂಪೋನೆಂಟ್ ಬಹಳ ಕಡಿಮೆ ಇದೆ. ಸಾಧಾರಣ 6 ಸಾವಿರ ಲೋನ್ ಆಗುತ್ತದೆ. ಒಂದು ಸಾವಿರ ಫಲಾನುಭವಿಗಳ ವಂತಿಕೆ ಆಗುತ್ತದೆ. ಆದ್ದರಿಂದ ಇದು ನಿಮ್ಮ ಕಾಲದಲ್ಲಿ ಆಗಿಲ್ಲ. ನನಗೆ ಗೊತ್ತು. ಭಾಗ್ಯಮಂದಿರ ಸ್ಕೀಮ್ ನಾವು ಇದ್ದಾಗ ಶುರುವಾಯಿತು. ಆದರ ಕಾಸ್ಟ್ ಈಗ ಹೆಚ್ಚಾಗಿದೆ. ಆದ್ದರಿಂದ ಸರ್ಕಾರಕ್ಕೆ ನಿಜವಾಗಿಯೂ ಈ ಬಡಜನರಿಗೆ ಮನೆ ಕಟ್ಟಿಕೊಡಬೇಕೆಂದು ಆಸಕ್ತಿ ಇದ್ದರೆ ತಾವು ಈ ಸಬ್ಸಿಡಿ ಕಾಂಪೊನೆಂಟ್‌ನ್ನು ಹೆಚ್ಚು ಮಾಡಬೇಕಾಗುತ್ತದೆ. ಬಡವರು ಹಳ್ಳಿಯಲ್ಲಿ ಇದ್ದರೂ ಬಡವರೇ, ಪಟ್ಟಣದಲ್ಲಿ ಇದ್ದರೂ ಬಡವರೇ. ಅದೇ ಪ್ರಕಾರ ಹಳ್ಳಿಗಳ ಬಡಜನರಿಗೆ ಏನು ಇವತ್ತು ಜನತಾ ಮನೆಗಳನ್ನು ಕಟ್ಟುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ಯಾವ ಪ್ರಕಾರ ಹಳ್ಳಿಯ ಬಡಜನರಿಗೆ ಸಹಾಯ ಮಾಡುತ್ತಿದ್ದೇವೆ ಅದೇ ಪ್ರಕಾರ ಪಟ್ಟಣದಲ್ಲಿರುವ ಬಡವರಿಗೂ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತು ಬಡವರಲ್ಲಿ ಹಳ್ಳಿಯವರು, ಪಟ್ಟಣದವರು ಎಂದು ವಿಭಜನೆ ಮಾಡುವುದು ಬೇಡ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಏನೆಂದರೆ, ತಾವು ಇದರ ಬಗ್ಗೆ ಪರಿಶೀಲನೆ ಮಾಡಿ ಯಾವ ಪ್ರಕಾರ ಈ ಬಡಜನರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವೆಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಅದೇ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು 1991-92ನೇ ಸಾಲಿನ ಬಜೆಟ್ ಭಾಷಣದಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಒಂದು ಸಾವಿರ ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಇದುವರೆಗೆ ಏನು ಮಾಡಿದಿರಿ ಸ್ವಾಮಿ? ಈಗಾಗಲೆ ಆರು ತಿಂಗಳೂ ಕಳೆಯಿತು. ಇವತ್ತು ಎಷ್ಟು ಭೂಮಿ ಅಕ್ವೈರ್ ಮಾಡಿದ್ದೀರಿ? ಎಲ್ಲೆಲ್ಲೂ ಅಕ್ವಿಸಿಷನ್ ನಡೆಯುತ್ತಿಲ್ಲ. ಹೌಸಿಂಗ್ ಬೋರ್ಡ್‌ನಲ್ಲಿ ಅಕ್ವಿಸಿಷನ್ ನಡೆಯುತ್ತಿಲ್ಲ, ಬಿ.ಡಿ.ಎ.ನಲ್ಲಿ ಅಕ್ವಿಸಿಷನ್ ನಡೆಯುತ್ತಿಲ್ಲ. ಸ್ಲಮ್ ಕ್ಲಿಯರೆನ್ಸ್ ಬೋರ್ಡಿನಲ್ಲಿ ಅಕ್ವಿಸಿಶನ್ ನಡೆಯುತ್ತಿಲ್ಲ. ತಾವು ಸಚಿವರಾದ ನಂತರ ಒಂದು

ವರ್ಷದಲ್ಲಿ ಎಷ್ಟು ಭೂಮಿಯನ್ನು ಬಡವರಿಗೆ ಹಂಚುವುದಕ್ಕೆ ಅಕ್ವೈರ್ ಮಾಡಿಕೊಂಡಿದ್ದೀರಿ? ಒಂದು ಎಕರೆ ಕೂಡ ಅಕ್ವೈರ್ ಇಲ್ಲ. ಅಕ್ವಿಸಿಶನ್ ಮಾಡುವುದು, ಡಿನೋಟಿಫಿಕೇಶನ್ ಮಾಡುವುದು. ಇದೇ ಕೆಲಸ ನಡೆಯುತ್ತಿದೆಯೇ ವಿನಹ ಅಕ್ವೈರ್ ಮಾಡುವ ಕೆಲಸ ನಡೆಯುತ್ತಿಲ್ಲ. ಇವತ್ತು ಒಂದು ಎಕರೆ ಭೂಮಿಯನ್ನು ಕೂಡ ನೀವು ಅಕ್ವೈರ್ ಮಾಡುವುದಕ್ಕೆ ಸಾಧ್ಯ ಆಗಿಲ್ಲ. ಮತ್ತೊಂದು ಕಾರ್ಯಕ್ರಮವನ್ನು ತಾವು ಹಾಕಿಕೊಂಡಿರಿ. "Construction of 30,000 EWS houses in all urban areas except Bangalore." ಇದು ತಮ್ಮ ಕಾರ್ಯಕ್ರಮ. ಇದರ ಬಗ್ಗೆ ಏನು ಮಾಡಿದಿರಿ? ಇಲ್ಲಿಯ ತನಕ ಏನು ಅಭಿವೃದ್ಧಿ ಮಾಡಿದ್ದೀರಿ? ಬೆಂಗಳೂರನ್ನು ಬಿಟ್ಟು, ಈ 30 ಸಾವಿರ ಮನೆಗಳನ್ನು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮುಖಾಂತರ ಮಾಡಿಸುತ್ತೀರೋ? ಅಥವಾ ಹೌಸಿಂಗ್ ಬೋರ್ಡ್ ಮುಖಾಂತರ ಮಾಡಿಸುತ್ತೀರೋ? ಯಾವುದರ ಮುಖಾಂತರ ಮಾಡಿಸುತ್ತೀರಿ?

ಅದರ ಬಗ್ಗೆ ಏನೂ ಕಾರ್ಯಕ್ರಮ ಕಾಣಿಸುತ್ತಾ ಇಲ್ಲ. ಅದೇ ಪ್ರಕಾರ ಬೆಂಗಳೂರು ಸಿಟಿಯಲ್ಲಿ ಎಲ್.ಐ.ಜಿ.2 ಹೌಸಸ್‌ಗೆ, ಕೆ.ಇ.ಬಿ.ಗೆ ಏಜೆನ್ಸಿ ಮಾಡಿ, ಸ್ಲಮ್ ಡ್ವೆಲ್ಲರ್ಸ್‌ಗೆ ಮನೆಗಳನ್ನು ಕಟ್ಟುತ್ತಿದ್ದೇವೆಂದು ಹೇಳಿದಿರಿ. ಯಾವ ಸ್ಲಮ್‌ನಲ್ಲಿ ಕಟ್ಟುತ್ತೀರಿ. ಸ್ಲಮ್ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ತಮಗೆ ಗೊತ್ತಿರುವಹಾಗೆ ಸ್ಲಮ್ಸ್ ಕೆಲವು ಪ್ರೈವೇಟ್‌ನಲ್ಲೂ ಇವೆ, ಕೆಲವು ಗವರ್ನಮೆಂಟ್ ಲ್ಯಾಂಡ್‌ನಲ್ಲೂ ಇವೆ. ನಾನು ಕಳೆದಸಾರಿ ತಮಗೆ ಹೇಳಿದ್ದೆ. ಏನೆಂದರೆ ಯಾವ ಬಡ ಜನ ಸರ್ಕಾರಿ ಲ್ಯಾಂಡ್‌ಮೇಲೆ ಮನೆ ಕಟ್ಟಿದ್ದಾರೆ, ಅದು ಹಟ್ ಇರಬಹುದು ಅಥವಾ ಸಣ್ಣ ಮನೆ ಇರಬಹುದು, ಅದರಿಂದ ಅಭಿವೃದ್ಧಿಗೆ ತೊಂದೆಯಾಗಿಲ್ಲವೆಂದರೆ ಅಂತಹ ಮನೆಗಳನ್ನು ರೆಗ್ಯುಲರೈಸ್ ಮಾಡಿ, ಅವರು ಏನು ಏರಿಯ ಎನ್‌ಕ್ರೋಚ್ ಮಾಡಿದ್ದಾರೆ ಅವರಿಗೆ ಅದರ ಓನರ್ ಷಿಪ್ ಕೊಡಿ ಎಂದು ಹೇಳಿದ್ದೆ. ಆದರೆ ಡೆವಲಪ್‌ಮೆಂಟ್ ಏರಿಯಾದಲ್ಲಿದ್ದರೆ ಆ ಸ್ಲಂ ಅನ್ನು ಷಿಫ್ಟ್ ಮಾಡಬೇಕಾಗುತ್ತದೆ. ಷಿಫ್ಟ್ ಮಾಡಿ, ಬೇರೆ ಕಡೆ ಅವರಿಗೆ ಜಾಗ ಕೊಡಬೇಕಾಗುತ್ತದೆ. ಆದರೆ ಸರ್ಕಾರ ಯಾವ ಸ್ಲಮ್ ಅನ್ನೂ ಷಿಫ್ಟ್ ಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ. ಬಡಜನರು ಸರ್ಕಾರಿ ಜಮೀನು ಮೇಲೆ ಏನು ಮನೆ ಕಟ್ಟಿಕೊಂಡಿದ್ದಾರೆ, ಅವರ ಬಗ್ಗೆ ಏನೂ ಕಾರ್ಯಕ್ರಮ ಹಾಕಿಕೊಂಡಿರುವುದು ಕಾಣಿಸುವುದಿಲ್ಲ. ಅಷ್ಟೇ ಅಲ್ಲ, ಪ್ರೈವೇಟ್ ಸ್ಲಮ್ಸ್ ಏನಿವೆ, ಅವುಗಳನ್ನು ತೆಗೆದುಕೊಳ್ಳಬೇಕಾದರೂ ದೊಡ್ಡ ಪ್ರೊಸೀಜರ್ ಇದೆ. It is not easy. ಅದರ ಬಗ್ಗೆ ತಾವು ಮಾಡಿದ್ದೀರಿ. ತಮ್ಮ ಇಲಾಖೆಯಿಂದ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಇವತ್ತು ಏನು ಖಾಸಗಿ ಮಾಲೀಕರಿದ್ದಾರೆ, ಅವರ ಒತ್ತಡ ಸರ್ಕಾರದ ಮೇಲಿದೆ. ಅವರು ಸ್ಲಮ್ಸ್ ಷಿಫ್ಟ್ ಮಾಡಿ, ವಾಪಸ್ ಭೂಮಿಯನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಹೀಗಾಗಿ ಇವತ್ತು ಸ್ಲಮ್ಸ್ ಸಮಸ್ಯೆ ಏಕೆ ಬರುತ್ತಿದೆ. ಹಿಂದುಳಿದ ಪ್ರದೇಶದಲ್ಲಿ ಬಡ ಜನರಿಗೆ ಉದ್ಯೋಗಾವಕಾಶ ಇಲ್ಲ. ಉದ್ಯೋಗಾವಕಾಶ ಇಲ್ಲವೆಂದು ಬಡ ಜನ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂ ಇಂತಹ ಪ್ರದೇಶಗಳಿಗೆ ಬರುತ್ತಾರೆ. ಮನೆ ಕಟ್ಟುವುದಕ್ಕೆ ಜಾಗ ಇಲ್ಲ, ಶಕ್ತಿ ಇಲ್ಲ, ಸ್ಲಮ್ಸ್ ಡೆವಲಪ್ ಆಗುತ್ತದೆ, ಸ್ಲಮ್ ಡೆವಲಪ್ ಆಗಬಾರದು. ಸ್ಲಂ ಡೆವಲಪ್ ಮಾಡಲಿಕ್ಕೆ ಎನ್‌ಕರೇಜ್ ಕೊಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಈಗ ಎಲ್ಲಿ ಸ್ಲಮ್ಸ್ ಇವೆ, ಇವುಗಳ ಬಗ್ಗೆ ಸರ್ಕಾರ ನಿರ್ದಿಷ್ಟವಾದ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಅಭಿವೃದ್ಧಿ ದೃಷ್ಟಿಯಿಂದ ಯಾವ ಯಾವ ಸ್ಲಮ್‌ಗಳು ಷಿಫ್ಟ್ ಆಗಬೇಕಾಗುತ್ತದೆ.

ಅವುಗಳನ್ನು ಷಿಫ್ಟ್ ಮಾಡಲಿಕ್ಕೆ ಬೇಕು. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ನಾವೂ ಕೂಡ ಸಹಕರಿಸುತ್ತೇವೆ. ಬಡವರು ಎನ್‌ಕ್ರೋಚ್ ಮಾಡಿರುವುದನ್ನು ರೆಗ್ಯುಲರೈಸ್ ಮಾಡಬಹುದು ಎಂಬ ಅಭಿಪ್ರಾಯಕ್ಕೆ ತಾವು ಬಂದಾಗ ಆ ಸ್ಲಮ್‌ಗಳನ್ನೂ ಸಹ ರೆಗ್ಯುಲರೈಸ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತು ಸರ್ಕಾರದಿಂದ ಈ ಬಗ್ಗೆ ಯಾವುದೇ ಕಾರ್ಯಕ್ರಮ ಇಲ್ಲ, ಅವರ ಪರ್‌ಫಾರ್ಮೆನ್ಸ್‌ನಲ್ಲೂ ಕಾಣುತ್ತಾ ಇಲ್ಲ. ಅಥವಾ ಅವರ ರಿಪೋರ್ಟ್‌ನಲ್ಲಿ ಎಲ್ಲಿಯೂ ಕಾಣಿಸುತ್ತಾ ಇಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಗುರುತು ಮಾಡಿರುವ ಪ್ರಕಾರ 1270 ಸ್ಲಮ್ಸ್ ಇವೆ. ಬೆಂಗಳೂರು ಪಟ್ಟಣದಲ್ಲಿ 401 ಇವೆ. ಪಾಪ್ಯುಲೇಷನ್ 11-12 ಲಕ್ಷ ಇದೆ. ಇದು ಗಂಭೀರವಾದ ಸಮಸ್ಯೆ. ಹೀಗಾಗಿ ಇದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು, ಇಲ್ಲಿ ಕೆಲಸ ಆಗಬೇಕಾಗುತ್ತದೆ. ಇವತ್ತು ನಮ್ಮ ಕಡೆ ಏನಾಗಿದೆ ಎಂದು ಹೇಳುತ್ತೇನೆ. ನಮ್ಮ ಕಾಲದಲ್ಲೂ ಇತ್ತು. ನಾನೂ ಪ್ರಯತ್ನ ಮಾಡಿದೆ, ಆದರೂ ಸಾಧ್ಯವಾಗಲಿಲ್ಲ. ಹುಬ್ಬಳ್ಳಿಯಲ್ಲಿ ಒಬ್ಬರೇ ಒಬ್ಬರು ಎಕ್ಸಿಕ್ಯುಟಿವ್ ಇಂಜಿನಿಯರ್ ಇದ್ದಾರೆ, ಅವರು 8-10 ಜಿಲ್ಲೆಗಳನ್ನು ನೋಡಬೇಕು. ಇಡೀ ಬಾಂಬೆ-ಕರ್ನಾಟಕ, ಹೈದರಾಬಾದ್-ಕರ್ನಾಟಕದಲ್ಲಿ ಅವರೊಬ್ಬರು ಕೆಲಸ ಮಾಡುವುದಕ್ಕೆ ಸಾಧ್ಯವೇ? ಅವರಿಗೆ ಇನ್‌ಫ್ರಾಸ್ಟ್ರಕ್ಚರ್ ಹೆಚ್ಚಿಗೆ ಕೊಡಬೇಕು, ಹೆಚ್ಚು ಸಿಬ್ಬಂದಿ ಕೊಡಬೇಕು. ಇದನ್ನು ಕೊಡಲಿಕ್ಕೆ ಆಗುತ್ತಾ ಇಲ್ಲ. ನಮ್ಮ ಕಾಲದಲ್ಲಿ ಏನು ಫೈಲ್ ಬಿಲ್ಡಪ್ ಆಗಿತ್ತು, ಯಾವ ಪ್ರಕಾರ ಆಗಿತ್ತು ಇವತ್ತು ಅದು ಅಲ್ಲಿಗೇ ನಿಂತಿದೆ, ಏನೂ ಆಗಿಲ್ಲ. ಹೀಗಾಗಿ ಇವತ್ತು ಬಾಂಬೆ-ಕರ್ನಾಟಕ, ಹೈದರಾಬಾದ್-ಕರ್ನಾಟಕ ಏರಿಯಾದಲ್ಲಿ ಸ್ಲಮ್ಸ್ ಪರಿಸ್ಥಿತಿ ಬಹಳ ಕೆಟ್ಟಿದೆ. ನಿಮ್ಮ ಇಲಾಖೆಯಿಂದ ಯಾವ ಪ್ರಕಾರ ಕೆಲಸ ಆಗಬೇಕೋ ಆ ಪ್ರಕಾರ ಕೆಲಸ ಆಗುತ್ತಾ ಇಲ್ಲ. ಇದನ್ನು ಒಬ್ಬ ಅಧಿಕಾರಿ ಮೇಲೆ ಅಪವಾದ ಮಾಡುತ್ತಾ ಇಲ್ಲ. ಏಕೆಂದರೆ, ಅವರಿಗೆ ಶಕ್ತಿ ಇಲ್ಲ, ಸಾಕಷ್ಟು ಸಿಬ್ಬಂದಿ ಇಲ್ಲ. ಈ ದೃಷ್ಟಿಯಿಂದ ಈ ಸ್ಲಮ್ ಬೋರ್ಡ್ ಏನಿದೆ, ಹೌಸಿಂಗ್ ಬೋರ್ಡ್ ಏನಿದೆ ಅದರ ಮುಖಾಂತರ, ನಿಮ್ಮ ಪ್ಲಾನಿಂಗ್ ಅಥಾರಿಟಿ, ಮುಖಾಂತರ, ಡೆವಲಪ್‌ಮೆಂಟ್ ಅಥಾರಿಟಿ ಮುಖಾಂತರ ಎಷ್ಟು ಸಾಧ್ಯವೋ ಅಷ್ಟು ಮನೆಗಳನ್ನು ಕಟ್ಟತಕ್ಕ, ನಿವೇಶನಗಳನ್ನು ಕೊಡತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ನಮ್ಮ ಹೌಸಿಂಗ್ ಬೋರ್ಡ್ ಇದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೌಸಿಂಗ್ ಬೋರ್ಡ್ ಚೇರ್ಮನ್ ಆದನಂತರ ಹೊಸ ಕ್ರಾಂತಿಯನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಏನೂ ಆಗಿಲ್ಲ. ಎಲ್ಲಾ ಸ್ಟ್ಯಾಂಡ್ ಸ್ಟಿಲ್ ಎಲ್ಲಿಯೂ ಭೂಮಿಯನ್ನು ಅಕ್ವೈರ್ ಮಾಡಿದ್ದು ನನ್ನ ಗಮನಕ್ಕೆ ಬರಲಿಲ್ಲ. ನಮ್ಮ ಸರ್ಕಾರ ಏನೇನು ಯೋಜನೆಗಳನ್ನು ಮಾಡಿತ್ತು. ಅಷ್ಟೇ ಇವೆ. ತಾವು ಬರೀ ಅಡಿಗಲ್ಲು ಹಾಕುತ್ತಿದ್ದೀರಿ, ಉದ್ಘಾಟನೆ ಮಾಡುತ್ತಿದ್ದೀರೇ ವಿನಹ ಹೊಸ ಯಾವ ಕೆಲಸಗಳೂ ಕಾಣಿಸುತ್ತಾ ಇಲ್ಲ. 12 ಸಾವಿರ ಮನೆಗಳನ್ನು ಕಟ್ಟತಕ್ಕ ಕಾರ್ಯಕ್ರಮ ಮಾನ್ಯ ರಾಜಶೇಖರ ಮೂರ್ತಿಯವರ ಬಜೆಟ್ ಸ್ಪೀಚ್‌ನಲ್ಲಿ ಇದೆ ಈ 12 ಸಾವಿರ ಮನೆಗಳ ಕಾರ್ಯಕ್ರಮ ಏನಾಯಿತು? ಇವತ್ತು ಹೌಸಿಂಗ್ ಬೋರ್ಡ್ ಪರಿಸ್ಥಿತಿ ನೋಡಿ ಮನೆಗಳ ಕ್ವಾಲಿಟಿ ಸರಿಯಿಲ್ಲ.

ಅದೇ ಪ್ರಕಾರವಾಗಿ ಅಪ್ಲಿಕೇಷನ್ಸ್ ತೆಗೆದುಕೊಳ್ಳುತ್ತಾರೆ. ಇದು ನಿಮ್ಮ ಕಾಲದಲ್ಲಿ ಇದೆ ಎಂದು ಅಲ್ಲ, ನಮ್ಮ ಕಾಲದಲ್ಲೂ ಇತ್ತು. ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ಹೇಳುತ್ತಾರೆ, 20 ಸಾವಿರ, 30 ಸಾವಿರ ರೂಪಾಯಿಗಳಿಗೆ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳುತ್ತಾರೆ. ಆ ಮನೆಗಳು 8-10 ವರ್ಷಗಳಾದರೂ ಆಗುವುದಿಲ್ಲ. ಬೆನಿಫಿಷಿಯರೀಸ್ ಹಣವನ್ನು ಇನ್‌ಟೈಮ್‌ನಲ್ಲಿ ಕೊಡುತ್ತಾರೆ. ನಂತರ ಮನೆ ಕಾಸ್ಟ್

80 ಸಾವಿರ ರೂಪಾಯಿಗಳು ಎಂದು ಕಳುಹಿಸುತ್ತಾರೆ. ಇದು ನಿಮ್ಮ ಕಾಲದಲ್ಲಿ ಮಾತ್ರ ನಡೆದಿದೆ ಎಂದು ಹೇಳುವುದಿಲ್ಲ. ನಮ್ಮ ಕಾಲದಲ್ಲೂ ಇತ್ತು. ಇದಕ್ಕೆ ಎಲ್ಲಾದರೂ ಪೂರ್ಣ ವಿರಾಮವನ್ನು ಹಾಕಬೇಕಾಗುತ್ತದೆ. ನಾನು ಹೌಸಿಂಗ್ ಬೋರ್ಡ್ ಮೇಲೆ ರೆಸ್ಪಾನ್ಸಿಬಿಲಿಟಿ ಹಾಕಬೇಕಾಗುತ್ತದೆ. 30 ಸಾವಿರ ರೂಪಾಯಿಗಳಿಗೆ ಮನೆ ಕೊಡುತ್ತೇವೆಂದು ಅಡ್‌ವರ್‌ಟೈಸ್ ಮಾಡಿದ ನಂತರ 30 ಸಾವಿರ ರೂಪಾಯಿಗೆ ಮನೆ ಸಿಗಬೇಕು. ಸರಿಯಾದ ರೀತಿಯಲ್ಲಿ, ಸರಿಯಾದ ಕ್ರಮದಲ್ಲಿ ಒಳ್ಳೆ ಕ್ವಾಲಿಟಿ ಕೆಲಸ ಆಗಬೇಕು.ಆರೀತಿ ಆಗಿಲ್ಲ ಎಂದರೆ ಅದರ ರೆಸ್ಪಾನ್ಸಿಬಿಲಿಟಿಯನ್ನು ಅಧಿಕಾರಿಗಳ ಮೇಲೆ, ಬೋರ್ಡ್ ಮೇಲೆ ಫಿಕ್ಸ್ ಮಾಡಿರಿ. ಬೆನಿಫಿಷಿಯರಿ ಏತಕ್ಕೆ ತೊಂದರೆಗೆ ಒಳಗಾಗಬೇಕು? ಇಂತಹ ಎಷ್ಟೋ ಸಮಸ್ಯೆಗಳು ನಿಮ್ಮ ಗಮನಕ್ಕೆ ಬಂದಿರಬಹುದು.

ಮಾನ್ಯ ಕಾಗೋಡು ತಿಮ್ಮಪ್ಪನವರ ಜೊತೆ ಈ ವಿಚಾರವಾಗಿ ಮಾತನಾಡಿದ್ದೇನೆ. ಅವರೂ ಕೂಡಾ ಒಪ್ಪಿಕೊಳ್ಳುತ್ತಾರೆ. ಹೀಗಾಗಿ ನೀವು ಈ ಬಗ್ಗೆ ಕಾನೂನಿನಲ್ಲಿ ತಿದ್ದುಪಡಿ ತರಬೇಕಾಗುತ್ತದೆ. ಯಾವ ಕಾಸ್ಟ್‌ಗೆ ಮನೆ ಕೊಡುತ್ತೇವೆಂದು ಹೇಳುತ್ತೀರಿ, ಅದೇ ಕಾಸ್ಟ್‌ಗೆ ಮನೆಯನ್ನು ಕೊಡಬೇಕು. ಇಲ್ಲದಿದ್ದರೆ ನೀವು ಮನೆ ಏತಕ್ಕೆ ಕಟ್ಟುವುದಕ್ಕೆ ಹೋಗಬೇಕು. ಇವತ್ತು ಇದಕ್ಕೆ ಸಂಬಂಧಪಟ್ಟ ಇಲಾಖೆಗಳಲ್ಲಿ ಸರಿಯಾದ ಕೋ-ಆರ್ಡಿನೇಷನ್ ಇಲ್ಲ. ಹೌಸಿಂಗ್ ಬೋರ್ಡ್, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್ ಸ್ಲಮ್ ಬೋರ್ಡ್ ಡೆವಲಪ್‌ಮೆಂಟ್ ಅಥಾರಿಟೀಸ್ ಇವರಲ್ಲಿ ಯಾವುದೇ ಕೋ-ಆರ್ಡಿನೇಷನ್ ಇಲ್ಲ. ಬೆಂಗಳೂರು ಮಟ್ಟದಲ್ಲಿ ಹೇಳುವುದಾದರೆ, ಬೆಂಗಳೂರು ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ನ ಕೋ-ಆರ್ಡಿನೇಷನ್ ಇಲ್ಲ, ಹೌಸಿಂಗ್ ಬೋರ್ಡ್ ಕಾಲೋನಿಗಳು ರೆಡಿಯಾಗುತ್ತದೆ. ಆದರೆ ವಿದ್ಯುಚ್ಛಕ್ತಿ ಇರುವುದಿಲ್ಲ, ಏಕೆಂದರೆ ಕೆ.ಇ.ಬಿ. ಜೊತೆ ಸರಿಯಾದ ಕೋ-ಆರ್ಡಿನೇಷನ್ ಇಲ್ಲ, ಕಾಲೋನೀಸ್ ರೆಡಿಯಾಗಿರುತ್ತದೆ, ನೀರು ಇಲ್ಲ, ಕಾಲೋನೀಸ್ ರೆಡಿಯಾಗಿದೆ, ನೀರು ಇದೆ, ವಿದ್ಯುಚ್ಛಕ್ತಿ ಇದೆ, ಆದರೆ ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟೀಸ್‌ಗೆ ಟ್ರಾನ್ಸ್‌ಫರ್ ಆಗಿರುವುದಿಲ್ಲ. ಹೀಗಾಗಿ ಹೌಸಿಂಗ್ ಬೋರ್ಡ್, ಕಾರ್ಪೋರೇಷನ್, ಮುನಿಸಿಪಾಲಿಟೀಸ್ ವಾಟರ್ ಸಪ್ಲೈ ಬೋರ್ಡ್, ಕೆ.ಇ.ಬಿ. ಇವರ ಮಧ್ಯೆ ಸರಿಯಾದ ಕೋ-ಆರ್ಡಿನೇಷನ್ ಆಗಬೇಕಾಗುತ್ತದೆ. ಅದಕ್ಕಾಗಿ ಒಂದು nodal agency ಮಾಡಬೇಕಾಗುತ್ತದೆ.

ಆಗ ಮಾತ್ರ ಕೆಲಸ ಸರಿಯಾದ ಸಮಯದಲ್ಲಿ ಆಗುವುದಕ್ಕೆ ಸಾಧ್ಯವಾಗುತ್ತದೆ, ನಾನು ನೋಡಿದ್ದೇನೆ. ಎಷ್ಟೋ ಕಡೆ ಹೌಸಿಂಗ್ ಬೋರ್ಡ್‌ನವರು ಕೆಲಸ ಮಾಡಿದ್ದಾರೆ. ಆದರೆ ಕೆ.ಇ.ಬಿ.ನವರು ಆರು ತಿಂಗಳು, ಒಂದು ವರ್ಷವಾದರೂ ಪವರ್ ಕೊಡುವುದಿಲ್ಲ. ಬೆಂಗಳೂರು ಮಟ್ಟದಲ್ಲಿ ಒಂದು ಕೋ-ಆರ್ಡಿನೇಷನ್ ಕಮಿಟಿ ಆಗಬೇಕಾಗುತ್ತದೆ. ಸರಿಯಾದ ಸಮಯದಲ್ಲಿ ಕೆಲಸ ಮಾಡಬೇಕಾದರೆ ಎಲ್ಲಾ ಚೀಫ್ ಎಂಜಿನಿಯರ್‌ಗಳು ಚೇರ್‍ಮನ್, ಬೋರ್ಡ್ಸ್‌ನ ಹಿರಿಯ ಅಧಿಕಾರಿಗಳು ಡಿಸ್ಕಷನ್ ಮಾಡಿ ಹೆಚ್ಚಿನ ಪ್ರೆಜರ್ ತಂದರೆ ಕೆಲಸ ಆಗುವುದಕ್ಕೆ ಸಾಧ್ಯವಾಗುತ್ತದೆ. ಅದು ಆಗದೆ ಇದ್ದುದರಿಂದ ಸರ್ಕಾರ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಕಾಣಿಸುವುದಿಲ್ಲ. ಹಾಗಾಗಿ ಬಡ ಜನರ ಸಲುವಾಗಿ ನಿವೇಶನ ಕೊಡುವ ಕಾರ್ಯಕ್ರಮ ಅಥವಾ ಮನೆಗಳನ್ನು ಕಟ್ಟುವ ಕಾರ್ಯಕ್ರಮ ಏನಿದೆ. ಇದರಲ್ಲಿ ನಿಮ್ಮ ಸರಕಾರ, ನಿಮ್ಮ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ತಾವು ಯುವಕರು, ಮತ್ತು ಸಾಕಷ್ಟು ಸಮಸ್ಯೆಗಳು ತಮಗೆ ಗೊತ್ತಿದೆ. ತಾವು ಬಂದ ಮೇಲೆ ಸರಿ ಆಗುತ್ತದೆಂದು ನಾನು ತಿಳಿದುಕೊಂಡಿದ್ದೆ. ತಮ್ಮ ಪರ್‌ಫಾರ್ಮೆನ್ಸ್ ಬಜೆಟ್ ನೋಡಿ, ರಿಪೋರ್ಟ್ ನೋಡಿ, ಮತ್ತು ನಿಮ್ಮ ಬಜೆಟ್ ನೋಡಿ. ಮಾನ್ಯ ರಾಜಶೇಖರಮೂರ್ತಿಯವರು ಮಂಡನೆ

ಮಾಡಿದ್ದ ಬಜೆಟ್ ನೋಡಿ, ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ ಬಜೆಟ್ ನೋಡಿ ಗೌರ್ನರ್ಸ್ ಅಡ್ರೆಸ್ ನೋಡಿ. ಇವುಗಳಲ್ಲಿ ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲ. ಇವತ್ತು ಯಾವುದೇ ತರಹದ ಕಾರ್ಯಕ್ರಮ ಕಾಣಿಸುವುದಿಲ್ಲ, ಇವತ್ತು ತಾವು ಮತ್ತೊಂದು ಹೊಸ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. 1990-91ನೇ ವರ್ಷದಲ್ಲಿ ಸ್ಪೆಷಲ್ ಸ್ಕೀಮ್ಸ್ ಕೆಲವು ಹಾಕಿಕೊಂಡಿದ್ದೀರಿ. for Beedi workers; Single Working Women, Self-financing scheme; rental housing scheme. ಮುಂತಾದ ಸ್ಕೀಮ್‌ಗಳನ್ನು ಹಾಕಿಕೊಂಡಿದ್ದೀರಿ. ಆ ಸ್ಕೀಮ್‌ಗಳು ಏನಾಗಿವೆ ಎಂದು ನಾನು ಫರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ನೋಡಿದೆ. Singal working women ಸ್ಕೀಮ್‌ನಲ್ಲಿ ಹದಿನಾರು ಮನೆ ಕಟ್ಟಿದ್ದೀರಿ. ಹದಿನಾರು ಮನೆಗಳನ್ನು ಕಟ್ಟುವುದಕ್ಕೆ ಇಷ್ಟು ದೊಡ್ಡ ಪ್ರಚಾರ ಏತಕ್ಕೆ? ಇಷ್ಟು ದೊಡ್ಡ ಪ್ರಚಾರ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಹೋಗಿದ್ದೀರಿ? ಬೀಡಿ ಕಾರ್ಮಿಕರಿಗೆ ಅನುಕೂಲ ಮಾಡಬೇಕಾದರೆ ಮ್ಯಾಸೀವ್‌ಆಗಿ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಿರಿ. ಮೊದಲು ಇಂಪ್ಲಿಮೆಂಟೇಷನ್ ಆಗುತ್ತದೆಯೇ ಎಂದು ನೋಡಿ. ಆದರೆ ಕೇವಲ ಕಾರ್ಯಕ್ರಮಗಳನ್ನು ಮಾಡಿ, ಪೊಳ್ಳು ಘೋಷಣೆಗಳನ್ನು ಮಾಡಿ ಮತ ತೆಗೆದುಕೊಳ್ಳಬೇಕಾದರೆ ಅದು ಬೇರೆ ಪ್ರಶ್ನೆ. ಆದರೆ ನಿಜವಾಗಿ ಏನು ಇಲಾಖೆಯಲ್ಲಿ Single working women, slum dwellers, weaker sections. ಅವರಿಗೆ ಸಹಾಯ ಮಾಡುವುದು ಇದ್ದರೆ ಈ ಕಾರ್ಯಕ್ರಮ ಕೇವಲ ಅನೌನ್ಸ್ ಮಾಡಿ ಬಿಟ್ಟರೆ ಆಗುವುದಿಲ್ಲ, ಅದನ್ನು ಇಂಪ್ಲಿಮೆಂಟೇಷನ್ ಮಾಡಬೇಕಾಗುತ್ತದೆ, ಇದು ಬಹಳ ಮಹತ್ವದ್ದು. ಇವತ್ತು ಕುಡಿಯುವ ನೀರಿನ ಅಭಾವ ಇದೆ. ಇಡೀ ರಾಜ್ಯದ ಎಲ್ಲಾ ಅರ್ಬನ್ ಏರಿಯಾದಲ್ಲಿ ಕುಡಿಯುವ ನೀರಿನ ಅಭಾವ ಇದೆ. ತಾವು ನನಗೆ ಕುಡಿಯುವ ನೀರಿನ ಅಭಾವ ಇಲ್ಲದ ಒಂದೇ ಒಂದು ಅರ್ಬನ್ ಸಿಟಿ ತೋರಿಸಿರಿ. ಯಾವುದೇ ಒಂದು ಅರ್ಬನ್ ಸಿಟಿಯಲ್ಲಿ ಕುಡಿಯುವ ನೀರು ಇಲ್ಲ ಎಂಬ ಯಾವ ಸಿಟಿ ಇದೆ ಹೇಳಿರಿ, ನೋಡೋಣ.

ಇದರ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಮತ್ತು ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಇದೆ. ಇದರಲ್ಲಿ ಏನು ಕಾರ್ಯಕ್ರಮ ನಿಮ್ಮದು. ನಮ್ಮ ಸರ್ಕಾರ ಇದ್ದಾಗ, ನಾವು ಮಂಜೂರು ಮಾಡಿದ ಕಾರ್ಯಕ್ರಮಗಳು ಏನು ಇದ್ದುವು ಅದಕ್ಕೆ ನೀವು ಹೋಗಿ ಅಡಿಗಲ್ಲು ಅಷ್ಟೇ ಹಾಕಿ ಬಂದಿರಿ. ಬೆಳಗಾಂ ಜಿಲ್ಲೆಯಲ್ಲಿ ಅಡಿಗಲ್ಲು ಹಾಕಿ ಬಂದಿರಿ. ಕುಮಟದಲ್ಲಿ ಅಡಿಗಲ್ಲು ಹಾಕಿ ಬಂದಿರಿ. ನಿಪ್ಪಾಣಿಯಲ್ಲಿ ಅಡಿಗಲ್ಲು ಹಾಕಿ ಬಂದಿರಿ. ಬೈಲಹೊಂಗಲದಲ್ಲಿ ಅಡಿಗಲ್ಲು ಹಾಕಿ ಬಂದಿರಿ. ಬಿಜಾಪುರದಲ್ಲಿ ಅಡಿಗಲ್ಲು ಹಾಕಿ ಬಂದಿರಿ. ಇವೆಲ್ಲಾ ನಾವು ಮಾಡಿದ ಕಾರ್ಯಕ್ರಮಗಳು. ಆದರೆ ನೀವು ಯಾವ ಒಂದು ಹೊಸ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದನ್ನು ಹೇಳಿ. ಕಳೆದ ಒಂದೆರಡು ವರ್ಷಗಳಲ್ಲಿ ನಿಮ್ಮ ಸರ್ಕಾರ ಬಂದ ನಂತರ ಯಾವ ಹೊಸ ಕಾರ್ಯಕ್ರಮವನ್ನು ನೀವೇ ಮಂಜೂರು ಮಾಡಿ ಮಾಡಿದ್ದೀರಿ. ಚಿಕ್ಕಮಗಳೂರಿನಲ್ಲಿ ನಿಮ್ಮದು ಯಾವ ಹೊಸ ಕಾರ್ಯಕ್ರಮ ಇದೆ. ಬಜೆಟ್ ಪ್ರಾವಿಜನ್ 20-22 ಕೋಟಿ ಮಾಡಿದ್ದೇವೆಂದು ಹೇಳಿದಿರಿ. ಇವತ್ತು ನಮ್ಮ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ಗೆ 22 ಕೋಟಿ ಅಲ್ಲ 55 ಕೋಟಿ ಪ್ರಾವಿಜನ್ ಮಾಡಿದರೂ ಕಡಿಮೆ. ಯಾವ ಪ್ರಕಾರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ದೂರ ಮಾಡಲಿಕ್ಕೆ ಪ್ರಾಧಾನ್ಯತೆ ಮೇಲೆ ನಿಮ್ಮ ಸರ್ಕಾರದಿಂದ ಕೆಲಸ ಆಯಿತೊ ಅದೇ ಪ್ರಕಾರ ಪಟ್ಟಣ ಪ್ರದೇಶದಲ್ಲಿರುವ ಜನರಿಗೂ ಕುಡಿಯುವ ನೀರು ಸಿಗಬೇಕು. ಅದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಎಲ್ಲಿ ನೀವು

ಅಡಿಗಲ್ಲು ಹಾಕಿ ಬಂದಿರಿ ಅಲ್ಲಿ ಏನು ಕೆಲಸ ನಡೆಯುತ್ತಿದೆ? ಮೊನ್ನೆ ನನ್ನ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿರಿ. ಕುಮಟ ಮತ್ತು ಹೊನ್ನಾವರ ವಾಟರ್ ಸಪ್ಲೈ ಬಗ್ಗೆ ಪ್ರಶ್ನೆ ಇತ್ತು. ನಾನೇ ಮಿನಿಸ್ಟರ್ ಇದ್ದಾಗ ಕ್ಲಿಯರ್ ಮಾಡಿಸಿದೆ. ಟೆಕ್ನಿಕಲ್ ಫ್ಲಾಗ್ ಮಾತ್ರ ಉಳಿದಿತ್ತು ಏನು ಮಾಡಿದಿರಿ? 10 ಅಥವಾ 8 ಲಕ್ಷ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದೇವೆ, ಮತ್ತೊಂದು ಕಡೆ ಮೂರು ಲಕ್ಷ ರೂಪಾಯಿಗಳ ಕೆಲಸ ಮಾಡಿದ್ದೀವೆಂದು ಹೇಳಿದಿರಿ. ಇದರಿಂದ ಏನಾದರೂ ಕೆಲಸ ಆಗಲಿಕ್ಕೆ ಸಾಧ್ಯ ಇದೆಯೇ ಸ್ವಾಮಿ. ಆದ್ದರಿಂದ ಈಗ ನೀವು ಯಾವ ರೀತಿ ಕೆಲಸ ತೆಗೆದುಕೊಂಡಿದ್ದೀರಲ್ಲ ಅವುಗಳನ್ನು ಮೊದಲು ಮುಗಿಸಿ. ಮತ್ತು ಯಾವ ಯಾವ ಪಟ್ಟಣದಲ್ಲಿ ಇವತ್ತು ಕುಡಿಯುವ ನೀರಿನ ಅಭಾವ ಇದೆ, ಅಲ್ಲಿ ಈ ಕುಡಿಯುವ ನೀರಿನ ಅಭಾವವನ್ನು ದೂರ ಮಾಡಲಿಕ್ಕೆ ಏನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ತಾವು ಪರಿಶೀಲಿಸಿ ಆದಷ್ಟು ಪ್ರಾಧಾನ್ಯತೆ ಮೇಲೆ ಈ ಕೆಲಸ ಮಾಡಬೇಕಾಗುತ್ತದೆ. ವಾಟರ್ ಬೋರ್ಡ್‌ಗೆ ಮತ್ತೊಂದು ಸಮಸ್ಯೆ ಇದೆ. ಎಷ್ಟೋ ವಾಟರ್‌ಸಪ್ಲೈ ಮ್ಯಾನೇಜ್‌ಮೆಂಟ್ ಬೋರ್ಡ್ ಕಡೆ ಇದೆ. ಹೀಗಾಗಿ ಮುನಿಸಿಪಾಲಿಟಿ ಮೇಲೆ ಯಾವುದೂ ರೆಸ್ಪಾನ್ಸಿಬಿಲಿಟಿ ಇಲ್ಲ. ಇದರಿಂದ ಇವತ್ತು ಬೋರ್ಡ್ ಲಾಸ್‌ನಲ್ಲಿ ಹೋಗುತ್ತಿದೆ. ಬೋರ್ಡ್‌ನವರು ಹೆಚ್ಚು ಮಾಡಿದರೆ ಅವರು ಒಪ್ಪಿಕೊಳ್ಳುವುದಿಲ್ಲ. ಜವಾಬ್ದಾರಿ ಬೋರ್ಡ್‌ಗೆ ಇದೆ. ಆದುದರಿಂದ ಆ ಸಮಸ್ಯೆಯನ್ನು ಸಹ ತಾವು ಬಗೆಹರಿಸಬೇಕು. ಪ್ರಾಕ್ಟಿಕಲ್ ಆಗಿ ಏನು ರೇಟ್ ಇದೆ, ಆ ರೇಟನ್ನು ನೀವು ನಿಗದಿ ಮಾಡಬೇಕಾಗುತ್ತದೆ. ಅಥವಾ ನೀವು ಮುನಿಸಿಪಾಲಿಟಿಗೆ ಜವಬ್ದಾರಿ ಕೊಡಬೇಕಾಗುತ್ತದೆ. ಇವತ್ತು ಬೆಂಗಳೂರು ನಗರದ ಪರಿಸ್ಥಿತಿ ಏನಾಗಿದೆ. ನಿಮ್ಮ ಏರಿಯಾದಲ್ಲಿ, ನಿಮ್ಮ ಕ್ಷೇತ್ರದಲ್ಲಿ ಪರಿಸ್ಥಿತಿ ಏನಿದೆ ಎನ್ನುವುದು ನಿಮಗೆ ಚೆನ್ನಾಗಿ ಗೊತ್ತು. ಕೆಲವು ಕಡೆ ಮೂರು ದಿನ ನಾಲ್ಕು ದಿನ ನೀರು ಇಲ್ಲ. ನಿಮ್ಮ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಕೊಟ್ಟಿದ್ದೀರಿ. ನಮಗೆ ನೀರು ಕೊಡಲಿಕ್ಕೆ ಬರುತ್ತಾ ಇಲ್ಲ ನಮಗೆ ತೊಂದರೆ ಆಗುತ್ತಿದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ನೀರು ಕೊಡಲಿಕ್ಕೆ ಆಗುವುದಿಲ್ಲ. Bangalore Water Supply & Drainage Board is going on to increase rates from 50% to 100% ಹೇಗೆ ಸಾಧ್ಯ? ಇವತ್ತು ನಿಮ್ಮ ಮೊನಾಪಲಿ ಇದೆ ನಡೆಯುತ್ತಿದೆ. ಇದು ಸರಿಯೇ? ನೀರು ಕೊಟ್ಟರೆ ಟ್ಯಾಕ್ಸ್ ತೆಗೆದುಕೊಳ್ಳಿ. ನೀರೂ ಕೊಡುವುದಿಲ್ಲ ಎಂದಮೇಲೆ ರೇಟ್ ಇನ್‌ಕ್ರೀಸ್ ಮಾಡಬಾರದು. ರೀಜನಬಲ್ ಇನ್‌ಕ್ರೀಜ್ ಮಾಡಬೇಕು. ನೀವು ರೇಟನ್ನು ಜಾಸ್ತಿ ಮಾಡುವುದಕ್ಕಿಂತ ಮುಂಚೆ ನೀರು ಹೇಗೆ ಸಿಗುತ್ತಿದೆ. ಎಂದು ನೀವು ತಿಳಿದುಕೊಳ್ಳಬೇಕು. ಇವತ್ತು ಎರಡು ದಿನ, ಮೂರು ದಿನಗಳೆಂದರೆ ನೀರು ಇಲ್ಲ. ಮೊನ್ನೆ ನಮ್ಮ ಪಕ್ಷದವರು ಮತ್ತು ಬೇರೆ ವಿರೋಧ ಪಕ್ಷದವರು ಧರಣಿ ಮಾಡಿದಾಗ ನಾವು ಚರ್ಚೆಗೆ ಕರೆಯುತ್ತೇವೆಂದು ಹೇಳಿದ್ದಾರೆ. ಚರ್ಚೆಗೆ ಕರೆದಿದ್ದಾರೆಯೇ ಎಂದು ನಿನ್ನೆ ನಾನು ಕೇಳಿದೆ, ಇಲ್ಲಿಯವರೆಗೆ ಯಾರನ್ನೂ ಕರೆದಿಲ್ಲವೆಂದು ಹೇಳಿದರು. ಹಾಗಾಗಿ ಈ ಸಮಸ್ಯೆ ನಮ್ಮ ಸರ್ಕಾರ ಇದ್ದಾಗಲೋ ಬಂದಿತ್ತು. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ತಕ್ಷಣ ಅದನ್ನು ವಿತ್‌ಡ್ರಾ ಮಾಡಿ. ಇದು ಸರಿಯಲ್ಲ,

ಇದರಿಂದ ನೀವು ಯಾವುದೂ ಸಾಧನೆ ಮಾಡುವುಕ್ಕೆ ಸಾಧ್ಯವಿಲ್ಲ. ನೀರು ಕೊಡದೆ ಇವತ್ತು ಕುಡಿಯುವ ನೀರಿನ ಟ್ಯಾಕ್ಸ್ ಹೆಚ್ಚು ಮಾಡುವುದು ಸರಿಯಲ್ಲ, ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ. ನಿಮ್ಮ ಬೆಂಗಳೂರು ಸಿಟಿ ಕಾರ್ಪೋರೇಟರ್ಸ್ ಇದ್ದಾರೆ, ನಿಮ್ಮ ಎಂ.ಎಲ್.ಎ.ಗಳು ಎಂ.ಎಲ್.ಸಿ.ಗಳು ಇದ್ದಾರೆ. ಅವರನ್ನು ಕರೆಸಿ, ಅವರನ್ನು ಇನ್‌ವಾಲ್ವ್ ಮಾಡಿ, ಅವರ ಹತ್ತಿರ ಚರ್ಚೆ ಮಾಡಿ. ಯೋಗ್ಯ ದರ ನಿಗದಿ

ಮಾಡಿ. ನಾನು ಸಂಪೂರ್ಣವಾಗಿ ಮಾಡಬಾರದೆಂದು ಹೇಳುತ್ತಿಲ್ಲ. ಆದರೆ ಒಬ್ಬ ಅಧಿಕಾರಿ ಮೇಲೆ ನೀವು ಎಲ್ಲಾ ಬಿಟ್ಟು, ವಾಟರ್ ಬೋರ್ಡ್ ಛೇರ್ಮನ್ ಹೇಳುತ್ತಾರೆಂದು ನೀವು ಮಾಡುತ್ತಾ ಹೋದರೆ ಹೆಚ್ಚು ದಿವಸ ನೀವು ಅಲ್ಲಿ ಕುಳಿತುಕೊಳ್ಳುವುದಿಲ್ಲ. ನೀವು ಬೇಗನೆ ಇಲ್ಲಿಗೆ ಬರುತ್ತೀರಿ. ಪಾಪ್ಯುಲಿಸ್ಟ್ ಇಡಿ ಎಂದು ನಾನು ಹೇಳುವುದಿಲ್ಲ. But you have to be very parctical and you have to be convinced that you have been able to give water. ಆ ಸಮಯದಲ್ಲಿ ನೀವು ತಿಳಿದುಕೊಳ್ಳಬೇಕಾಗುತ್ತದೆ. ಇನ್‌ಕ್ರೀಸ್ ಎಷ್ಟು ಇರಬೇಕು, ಯಾವ ಪ್ರಕಾರ ಮಾಡಬೇಕು, ಯಾವ ಸಮಯದಲ್ಲಿ ಮಾಡಬೇಕು ಎನ್ನುವುದನ್ನು ನೀವು ತಿಳಿದುಕೊಳ್ಳಬೇಕಾಗುತ್ತದೆ. ಮಾನ್ಯ ರಾಜಶೇಖರಮೂರ್ತಿಯವರು ಕಾವೇರಿ ಮೂರನೇ ಹಂತದ ಯೋಜನೆ 1991ನೇ ವರ್ಷದ ಕೊನೆಗೆ ಮುಗಿಯುತ್ತದೆ ಎಂದು ಹೇಳಿದರು. ಇವತ್ತು ಏನಾಗಿದೆ ಸ್ವಾಮಿ? ಈ ಸ್ಪೀಡ್‌ನಲ್ಲಿ ಹೋದರೆ 1992 ಅಲ್ಲ 1994 ಆದರೂ ಆ ಯೋಜನೆ ಮುಗಿಯುವುದಿಲ್ಲ. ಎಂದು ನನಗನ್ನಿಸುತ್ತದೆ. ಯಾವತನಕ ಕಾವೇರಿ ಥರ್ಡ್ ಸ್ಟೇಜ್ ಮುಗಿಯುವುದಿಲ್ಲವೋ ಆ ತನಕ ಈ ಸಮಸ್ಯೆ ಇರುವುದೇ. ತಿಪ್ಪಗೊಂಡನಹಳ್ಳಿ ಕೆರೆಯಲ್ಲಿ ಇವತ್ತಿಗೂ ನೀರು ಇಲ್ಲ.

ಇವತ್ತು ಕೆಲವು ಕಡೆ 3-4 ದಿನಗಳಾದರೂ ನೀರು ಕೊಡುತ್ತಿಲ್ಲ. ಮುಂದೆ ಒಂದು - ಎರಡು ತಿಂಗಳಲ್ಲಿ ಪರಿಸ್ಥಿತಿ ಏನಾಗ ಬಹುದು ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ಬೋರ್‌ವೆಲ್ ಹಾಕಿಸುತ್ತೇವೆಂದು ಹೇಳುತ್ತೀರಿ. ಆದರೆ ಬೋರ್‌ವೆಲ್ಸ್ ಡಿಗ್ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಬೋರ್‌ವೆಲ್‌ಗಳನ್ನು ಎಷ್ಟು ಡಿಗ್ ಮಾಡಿದರೆ ಅಷ್ಟು ಗ್ರೌಂಡ್ ವಾಟರ್ ಲೆವಲ್ ಕಡಿಮೆಯಾಗುತ್ತದೆ. ಹಾಗಾಗಿ permanent solutions are always better than temporary measures. ಕಾವೇರಿ ಥರ್ಡ್ ಸ್ಟೇಜ್ ಮುಗಿಸಲಿಕ್ಕೆ don't only depend upon officers. ತಮ್ಮ ಲೀಡರ್‌ಷಿಪ್‌ನಲ್ಲಿ ಇವತ್ತು ಹೆಚ್ಚಿನ ಮಹತ್ವ ಕೊಟ್ಟು ಕೆಲಸ ಮಾಡಿಸಿ. ಇದರ ಜೊತೆಗೆ ಕಾವೇರಿ 4ನೇ ಸ್ಟೇಜ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಏನು ಮಾಡಿದ್ದೀರೆಂಬುದನ್ನು ಇದರಲ್ಲಿ ಕಾಣಿಸಿಲ್ಲ. ಹಾಗಾಗಿ ಕಾವೇರಿ 4ನೇ ಹಂತದ ಯೋಜನೆ ಏನಿದೆ ಅದಕ್ಕೆ ತಾವು ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು, ವರ್ಲ್ಡ್ ಬ್ಯಾಂಕಿನಿಂದಾಗಲೀ, ಮತ್ತೊಂದು ಕಡೆಯಿಂದಾಗಲೀ ಹಣ ತಂದು ಈ ಕೆಲಸ ಶುರು ಮಾಡಬೇಕಾಗುತ್ತದೆ. ತಾವು ಹೇಳಿದಂತೆ ಬೆಂಗಳೂರು ಪಾಪ್ಯುಲೇಷನ್ ಇವತ್ತು 30-32 ಲಕ್ಷ ಅಲ್ಲ, ಬೆಂಗಳೂರಿನಲ್ಲಿ 40 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಇದರ ಹೊರತಾಗಿ ಫ್ಲೋಟಿಂಗ್ ಪಾಪ್ಯುಲೇಷನ್ ಇದೆ. ಲಕ್ಷಾವಧಿ ಜನ ಪ್ರತಿ ದಿನ ಬರುತ್ತಾರೆ, ಹೋಗುತ್ತಾರೆ. Bangalore population might have crossed more than 45 lakhs. The city is growing. Problems are increasing. ಇಂಥಾ ಒಂದು ಪರಿಸ್ಥಿತಿಯಲ್ಲಿ ತಾವು ಪರ್ಮನೆಂಟ್ ಆದ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲವೆಂದರೆ ಈ ಟೆಂಪೊರರಿ ಮೆಷರ್ಸ್‌ನಿಂದ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಬೋರ್‌ವೆಲ್ ಹಾಕಿ. ಅದಕ್ಕೆ ಪಂಪ್‌ಸೆಟ್ ಹಾಕಬೇಕಾಗುತ್ತದೆ. ಬರೀ ಬೋರ್‌ವೆಲ್‌ಗಳನ್ನು ಹೊಡೆಯುತ್ತಾ ಹೋದರೆ ಏನೂ ಆಗುವುದಿಲ್ಲ. ನಾವು ಇದ್ದಾಗ ಕೆಲವು ಕಡೆ ಮಾಡಿದ್ದೇವೆ. ಹಾಗಾಗಿ ಎಲ್ಲಿ ಪೊಟೆನ್‌ಷಿಯಲ್ ಇದೆಯೋ ಎಲ್ಲಿ ಬೋರ್‌ವೆಲ್ ಬೇಕೋ ಅಲ್ಲಿ ಬೋರ್‌ವೆಲ್ ಮಾಡಿ. ಆದರೆ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್ ಹಾಕಬೇಕಾಗುತ್ತದೆ. ಆದಷ್ಟು ಬೇಗ ಈ ಕಾರ್ಯಕ್ರಮ ವಾರ್‌ಫುಟಿಂಗ್ಸ್‌ನಲ್ಲಿ ಆಗಬೇಕು. I am warning you that the

Government may land in trouble. ನೀವು ಇಮ್ಮಿಡಿಯಟ್ ಆಕ್ಷನ್ ತೆಗೆದುಕೊಂಡಿಲ್ಲವೆಂದರೆ ಆಗುವುದಿಲ್ಲ. ಆ ದೃಷ್ಟಿಯಿಂದ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕು. ಅದೇ ಪ್ರಕಾರ ನಮ್ಮ ಪಟ್ಟಣ ಪ್ರದೇಶಗಳಲ್ಲಿ ಅಂದರೆ ನಿಪ್ಪಾಣಿಯಾಗಲೀ, ಬೈಲಹೊಂಗಲವಾಗಲೀ, ಬೆಳಗಾಂ ಆಗಲೀ, ಕುಮಟಾ ಆಗಲೀ ಹೊನ್ನಾವರ ಆಗಲಿ, ಎಲ್ಲೆಲ್ಲಿ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೋ ಆ ಕಾರ್ಯಕ್ರಮವನ್ನು ಆದಷ್ಟು ಬೇಗ ಪ್ರಾಧಾನ್ಯತೆ ಮೇಲೆ ಮುಗಿಸಲಿಕ್ಕೆ ಪ್ರಯತ್ನ ಮಾಡಿ. ಹೊಸ ಕಾರ್ಯಕ್ರಮ ತೆಗೆದುಕೊಳ್ಳುವುದನ್ನು ಮುಂದೆ ನೋಡೋಣ. ಈಗ ಎಲೆಕ್ಷನ್ ಇಲ್ಲ, ಏನೂ ಚಿಂತೆ ಮಾಡಬೇಡಿ. ಯಾವುದಾದರೂ ಕಾರ್ಯಕ್ರಮ ತೆಗೆದುಕೊಂಡು ಯಾರನ್ನಾದರೂ ಸಮಾಧಾನ ಮಾಡುವ ಪ್ರಶ್ನೆ ಇಲ್ಲ. ಈಗಾಗಲೆ ತೆಗೆದುಕೊಂಡಿರುವ ಕಾರ್ಯಕ್ರಮವನ್ನು ಮೊದಲು ಮುಗಿಸಿ. ಎರಡನೆಯದು ನಾನು ಹೇಳುತ್ತೇನೆ. ನನ್ನದೇ ಊರಿನಲ್ಲಿ ಒಂದು ಕಾರ್ಯಕ್ರಮವನ್ನು ನಾವು ಮಂಜೂರು ಮಾಡಿದ್ದೆವು. ನಾನು ಮಂತ್ರಿಯಾಗಿದ್ದಾಗ ಮಂಜೂರಾಗಿತ್ತು. ನಮ್ಮ ಅಧಿಕಾರ ಹೋದಮೇಲೆ ಆ ಕೆಲಸ ಒಂದೂವರೆ ವರ್ಷಗಳಿಂದ ಹಾಗೇ ನಿಂತಿದೆ. ನಾನು ಮಂಜೂರು ಮಾಡಿದಂಥ ಕೆಲಸ ನಿಂತರೆ ನನಗೆ ಏನೂ ಬೇಜಾರಿಲ್ಲ. ಅದರಿಂದ ನನಗೆ ತೊಂದರೆಯಾಗುವುದಿಲ್ಲ, ಆದರೆ ಜನಕ್ಕೆ ತೊಂದರೆಯಾಗುತ್ತದೆ. ನಾನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆಂದು ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ. ಆದರೆ ಆ ಪ್ರಕಾರ ಆಗಬಾರದು. ಒಂದು ಸರ್ಕಾರ ಹೋಗಿ, ಮತ್ತೊಂದು ಸರ್ಕಾರ ಬಂದ ನಂತರ ಹಿಂದಿನ ಕಾರ್ಯಕ್ರಮಗಳೇನಿವೆ ಅವುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಆ ಕೆಲಸ ಮಾಡಬೇಕಾಗುತ್ತದೆ. ಅದೇರೀತಿ ಮಲಪ್ರಭಾ ರಿಸರ್ವಾಯರ್‌ನಿಂದ ಹುಬ್ಬಳ್ಳಿ-ಧಾರವಾಡ ಎರಡನೇ ಸ್ಟೇಜ್ ಏನಾಗಿದೆ? ನಮ್ಮ ಮಾನ್ಯ ಗೋಪಿನಾಥ ಸಾಂಡ್ರಾ ಸಾಹೇಬರು ಇದರ ಬಗ್ಗೆ ಏನೇನು ಗಲಾಟೆ ಮಾಡಿದರು ಮಾನ್ಯ ವೀರೇಂದ್ರಪಾಟೀಲರನ್ನು ಕರೆದುಕೊಂಡು ಹೋದರು, ದೊಡ್ಡ ಕಾರ್ಯಕ್ರಮ ಮಾಡಿದರು ಅಡಿಗಲ್ಲು ಹಾಕಿದರು. ಆಗ ಮಾನ್ಯ ಸಾಂಡ್ರಾರವರು ಕೇಳಿದರು ಬೊಮ್ಮಾಯಿಯವರು ಏನು ಮಾಡಿದರು. ನಾನು ಶಾಸಕನಾಗಿದ್ದೇನೆ, ಹಾಗೆ ಮಾಡಿದ್ದೇನೆ. ಎಂದು ಹೇಳಿದರು ಇವತ್ತು ಏನಾಗಿದೆ? ಅಲ್ಲಿನ ಸಮಸ್ಯೆ ನನಗಿಂತಾ ಚೆನ್ನಾಗಿ ಅವರಿಗೇ ಗೊತ್ತು. ಅಲ್ಲೂ ಕೂಡ ಜನ ಕುಡಿಯುವ ನೀರಿಗಾಗಿ 3 ದಿನ, 4 ದಿನ ಕಾಯಬೇಕು. ಆ ಯೋಜನೆ ಮೇಲೆ ಇವತ್ತು ಸರ್ಕಾರದ ಎಷ್ಟು ಹಣ ಖರ್ಚು ಮಾಡಿದೆ ? ನಾನು ಮಂತ್ರಿ ಇದ್ದಾಗ 100 ಲಕ್ಷ ಡೆಪಾಸಿಟ್ ಮಾಡಿದ್ದು, ತದನಂತರ ನಮ್ಮ ರಾಷ್ಟ್ರಪತಿಗಳ ಆಡಳಿತದಲ್ಲಿ ಹಣ ಇಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲ. 100 lakhs we have deposited for this scheme. It was reserved only for Malaprabha Second Stage. ಇವತ್ತು ಆ ಯೋಜನೆ ಕೆಲಸ ಆಗಿಲ್ಲ. ಮೈಸೂರಿನಲ್ಲೂ ಕುಡಿಯುವ ನೀರಿನ ಸಮಸ್ಯೆ ಇದೆ. ಆದುದರಿಂದ ಇವತ್ತು ಕುಡಿಯುವ ನೀರಿನ ಅಭಾವವನ್ನು ನೀಗಿಸಲಿಕ್ಕೆ ತಾವು ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ಅದರಲ್ಲೂ ಬೆಂಗಳೂರಿನಂಥ ಪಟ್ಟಣದಲ್ಲಿ ಇದು ಜ್ವಲಂತ ಸಮಸ್ಯೆಯಾಗಿದೆ. ಇದನ್ನು ವಾರ್‌ಫೂಟಿಂಗ್‌ನಲ್ಲಿ ತಾವು ಬಗೆಹರಿಸದಿದ್ದರೆ ಮುಂದೆ ಅದು ಅಸಾಧ್ಯವಾದ ಸಮಸ್ಯೆಯಾಗಬಹುದು. ಮತ್ತೆ ಈ ನಮ್ಮ ಕಾವೇರಿ 4ನೇ ಸ್ಟೇಜ್‌ನಿಂದ 540 ಎಂ.ಎಲ್.ಡಿ. ವಾಟರ್ ಸಲ್ಲಿಸಲಿಕ್ಕೆ ಸಾಧ್ಯವಾಗಬಹುದೆಂದು ತಮ್ಮ ಕಾರ್ಯಕ್ರಮ ಇದೆ. ಹಾಗಾಗಿ ಇದಕ್ಕೆ ಹೆಚ್ಚಿನ ಮಹತ್ವ ಕೊಡಿ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಇವತ್ತು ಬೆಂಗಳೂರು ಸಿಟಿ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಬೇಕಾಗುತ್ತದೆ. ಇವತ್ತು ಬೆಂಗಳೂರು ಸಿಟಿಯ ಸಮಸ್ಯೆಗಳು ಬಹಳ ಕಾಂಪ್ಲಿಕೇಟೆಡ್ ಆಗಿದೆ ಮತ್ತು

ದಿನೇದಿನೇ ಹೊಸ ಹೊಸ ಸಮಸ್ಯೆಗಳು ನಿರ್ಮಾಣ ಆಗುತ್ತಿವೆ. ಇವತ್ತು ನಿಮ್ಮದೇ ಆದ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ. ಲಾಸ್ಟ್ ಡಿಕೇಡ್‌ನಲ್ಲಿ ಬೆಂಗಳೂರಿನದು ಆವರೇಜ್ 76 ಪರ್ಸೆಂಟ್ ಗ್ರೋತ್ ಇದೆ. This is the 5th largest city in the country today. ಬೆಂಗಳೂರಿನಲ್ಲಿ 30-32 ಲಕ್ಷ ಪಾಪುಲೇಷನ್ ಇದೆಯೆಂದು ನೀವು ಹೇಳಿರುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಾನು 40 ಲಕ್ಷದ ಮೇಲೆ ಇದೆ ಎಂದು ಹೇಳಿದೆ. ಮಾನ್ಯ ವಾಟಾಳ್ ನಾಗರಾಜ್ ಅವರು 45 ಲಕ್ಷ ಇದೆ ಎಂದು ಹೇಳಿದರು. ಇದು ನಿಮಗೆ ಬಿಟ್ಟ ಪ್ರಶ್ನೆ. ಇವತ್ತು ಏನು ಆಗುತ್ತಿದೆ ? ರೋಡ್ ಕಂಡೀಷನ್ಸ್ ಏನು ಇದೆ ? ನಾನು ಒಪ್ಪಿಕೊಳ್ಳುತ್ತೇನೆ. ಕಾರ್ಪೋರೇಷನ್ ಕಡೆ ಹಣ ಇಲ್ಲ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ, ಕಾರ್ಪೋರೇಷನ್ ಮಾಡಬೇಕಾಗಿತ್ತು ಎಂದು ನೀವು ಹೇಳಬಹುದು. ಇದು ಸಾಧ್ಯ ಇಲ್ಲ. ನಾವು ಕಾರ್ಪೋರೇಷನ್ ಹಾಗೂ ಮುನಿಸಿಪಾಲಿಟಿಗಳಿಗೆ ಹೆಚ್ಚಿನ ಶಕ್ತಿ ಬರಬೇಕು ಎಂದು ಮೋಟಾರ್ ವೆಹಿಕಲ್ಸ್‌ನಿಂದ, ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್‌ನಿಂದ, ಅಕ್ಟ್ರಾಯನಿಂದ ಹೆಚ್ಚಿನ ಹಣ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೆವು, ಹಣ ಕೂಡ ರಿಲೀಸ್ ಮಾಡಿದ್ದೆವು. ನಾನು ಮಂತ್ರಿ ಆಗಿದ್ದಾಗ ಇದನ್ನು ಮಾಡಿದ್ದೇವೆ. ತಾವು ರೆಕಾರ್ಡ್ಸ್ ತೆಗೆದು ನೋಡಿ. ನಾನು ಒಪ್ಪಿಕೊಳ್ಳುತ್ತೇನೆ. ಆಕ್ಟ್ರಾಯ್ ಆದಾಯ ಹೋದ ನಂತರ ಇವತ್ತು ಮುನಿಸಿಪಾಲಿಟಿಗಳಿಗೆ ರೆವಿನ್ಯೂ ಅಂದರೆ ಮನೆ ಟ್ಯಾಕ್ಸ್ ವಸೂಲಿ ಬಿಟ್ಟರೆ ಬೇರೆ ಯಾವುದೇ ರೆವಿನ್ಯೂ ಇಲ್ಲ. ಪ್ಲಸ್ ನಿಮ್ಮ ಕಡೆಯಿಂದ ಬಿಡುಗಡೆ ಆಗುವ ಹಣ. ಅದು ಅಕ್ಟ್ರಾಯ್ ಕಾಂಪೆನ್‌ಸೇಷನ್ನೋ ಅಥವಾ ಮೋಟಾರ್ ವೆಹಿಕಲ್ ಟ್ಯಾಕ್ಸೋ ಅಥವಾ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸೋ ಇರಬಹುದು. ಅಷ್ಟೇ. ಹೀಗಾಗಿ ಮುನಿಸಿಪಾಲಿಟಿಗಳ, ಕಾರ್ಪೋರೇಷನ್‌ಗಳ ಆದಾಯ ಹೆಚ್ಚು ಮಾಡುವುದಕ್ಕೆ ಯಾವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆಯೆಂದರೆ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಇವತ್ತು ತಾವು ಕಾರ್ಪೋರೇಷನ್ ಈ ಕೆಲಸಗಳನ್ನು ಮಾಡಬೇಕಾಗಿತ್ತು ಎಂದು ಹೇಳಬಹುದು. ತಾವು ಏನೂ ಮಾಡುವುದಕ್ಕೆ ಬರುತ್ತದೆ. ರೋಡ್ ಕಂಡೀಷನ್ಸ್ ಸರಿಯಾಗಿ ಇಲ್ಲ, ಕಾರ್ಪೋರೇಷನ್ಸ್, ಮುನಿಸಿಪಾಲಿಟಿಗಳು ಮಾಡಬೇಕೆಂದು ತಾವು ಹೇಳಬಹುದು. ಆದರೆ ಪ್ರಶ್ನೆ ಏನು ಇದೆ ಎಂದರೆ, ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕು. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ತಾವು ಸಾಕಷ್ಟು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕಾಗುತ್ತದೆ. ಸಾಕಷ್ಟು ಫಂಡ್‌ನ್ನು ಇಡಬೇಕಾಗುತ್ತದೆ.

ಬೆಂಗಳೂರು ಸಿಟಿ ಸಮಸ್ಯೆ ಬಗ್ಗೆ ತಾವು ಚೀಫ್ ಮಿನಿಸ್ಟರ್ ಫಂಡ್ ನೂರು ಕೋಟಿ ರೂಪಾಯಿಗಳನ್ನು ಮಾಡುತ್ತೇವೆ ಎಂದು ಹೇಳಿದಿರಿ. ಇದನ್ನು ಹೇಳಿ ಎಷ್ಟು ತಿಂಗಳಾಯಿತು ಎಂದರೆ 7 ತಿಂಗಳು ಆಯಿತು. ಈ ಫಂಡ್‌ನಲ್ಲಿ ಒಂದು ದುಡ್ಡಾದರೂ ಬಂತೇ ಎಂದರೆ ಇಲ್ಲ. ಅಂದಮೇಲೆ ಏಕೆ ಇಂತಹ ಘೋಷಣೆ ಮಾಡುತ್ತೀರಿ? ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ನಾಲ್ಕು ತಿಂಗಳಲ್ಲಿ ಗ್ರಾನೈಟ್ ಕ್ವಾರಿಗೆ ಲೈಸನ್ಸ್ ಕೊಟ್ಟ ಪರಿಣಾಮವಾಗಿ 64 ಲಕ್ಷ ರೂಪಾಯಿಗಳ ಆದಾಯ ಆಗಿದೆ ಎಂದು ಹೇಳಿದರು. 100 ಕೋಟಿ ರೂಪಾಯಿಗಳ ಚೀಫ್ ಮಿನಿಸ್ಟರ್ ಫಂಡ್‌ಗೆ ಅದರ ಪೈಕಿ ಒಂದು ಐದು ಲಕ್ಷ ರೂಪಾಯಿಗಳನ್ನಾದರೂ ಹಾಕಬೇಕಾಗಿತ್ತು. ಇವತ್ತು ಮುಖ್ಯಮಂತ್ರಿಗಳ ನಿಧಿಯಲ್ಲಿ ಒಂದು ದುಡ್ಡೂ ಇಲ್ಲ, ಅದಕ್ಕಿಂತ ಮುಂಚೆ ಮಾನ್ಯ ರಾಜಶೇಖರಮೂರ್ತಿಯವರು, ಸೆಂಟ್ರಲ್ ಗವರ್ನಮೆಂಟ್‌ನಿಂದ ನಾವು 100 ಕೋಟಿ ರೂಪಾಯಿಗಳನ್ನು ತರುತ್ತೇವೆ ಎಂದು ಹೇಳಿದರು. ಅದು ಮಹಾರಾಷ್ಟ್ರದಲ್ಲಿ ಫೈನಾನ್ಸ್ ಮಿನಿಸ್ಟರ್ ನಾನು ಬಾಂಬೆ ಬಗ್ಗೆ ತರುತ್ತೇನೆ ಎಂದು ಹೇಳಿದ್ದರು. ಹಾಗೆಯೇ ಇವರೂ ಹೇಳಿರಬಹುದು. ಏನು ಆಯಿತು ಸ್ವಾಮಿ? ಸೆಂಟ್ರಲ್ ಗವರ್ನಮೆಂಟೂ ನಿಮ್ಮದೇ. ಅಲ್ಲಿಂದ ಒಂದು ದುಡ್ಡೂ

ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಚೀಫ್ ಮಿನಿಸ್ಟರ್ ಫಂಡ್‌ನಲ್ಲಿ ಒಂದು ದುಡ್ಡೂ ಇಲ್ಲ. ಸರ್ಕಾರದ ಪರಿಸ್ಥಿತಿ ನಮಗೆ ಗೊತ್ತಿದೆ. ಇವತ್ತು ಮನೆ ಕಟ್ಟಲಿಕೆ ಸರ್ಕಾರದ ಕಡೆ ಹಣ ಇಲ್ಲ. ನಿವೇಶನಕ್ಕೆ ಸಬ್ಸಿಡಿ ಕೊಡಲಿಕ್ಕೆ ಸರ್ಕಾರದ ಕಡೆ ಹಣ ಇಲ್ಲ. ನಿಮಗೆ ಎಲ್ಲಾ ರೆವಿನ್ಯೂಸ್ ಕಡಿಮೆಯಾಗುತ್ತಿದೆ. ಟ್ರೆಜರಿ ಬ್ಯಾಂಕ್‌ರಫ್ಟ್ ಆಗಿದೆ ಎನ್ನುವುದು ನಮಗೆ ಗೊತ್ತಿದೆ. ಹಾಗಾದರೆ ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೀರಿ? Road conditions are not good. ಅದೇ ಪ್ರಕಾರ Sanitation is worst in Bangalore. ಬೆಂಗಳೂರಿನಲ್ಲಿ ಮಸ್ಕಿಟೋಸ್ ಯಾವ ದೊಡ್ಡ ಪ್ರಮಾಣದಲ್ಲಿ ಬೆಳೆದಿವೆ ಎಂದರೆ, ಅದರ ಲೆಕ್ಕ ನಮಗಿಂತ ನಿಮಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ಬೆಂಗಳೂರು ಸಿಟಿಯ ಪರಿಚಯ ನನಗಿಂತ ನಿಮಗೆ ಚೆನ್ನಾಗಿ ಇದೆ. ಇದರ ಬಗ್ಗೆ ಯಾವ ಮೆಷರ್ಸ್ ತೆಗೆದುಕೊಂಡಿದ್ದೀರಿ? Corporation Health Department is most corrupt. ಅದು ಏನೇನೂ ಕೆಲಸ ಮಾಡುವುದಿಲ್ಲ, ಹಾಗಾಗಿ ಇವತ್ತು ಈ ಪಟ್ಟಣ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ದೂರ ಮಾಡುವುದಕ್ಕಾಗಲೀ, ರಸ್ತೆಗಾಗಲೀ ಮತ್ತೊಂದು ಕೆಲಸ ಮಾಡುವುದಕ್ಕೆ ಆಗಲಿ ತಾವು ಯಾವುದಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ತಾವು ಕೇಂದ್ರಸರ್ಕಾರದಿಂದ ಈ ಬಗ್ಗೆ ಪರಿಹಾರ ಕೇಳುತ್ತೇವೆ ಎಂದು ಹೇಳಿದ್ದೀರಿ. ಆದರೆ ಏನಾದರೂ ಮಾಡಿ. ಒಂದು ಒಂದೂವರೆ ವರ್ಷ ಆಯಿತು, ಏನೂ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಫಂಡ್ ಮಾಡಿ. ಇಂಟರೆಸ್ಟ್ ಇದ್ದವರಿಗೆ ಹೇಳಿ, ನಮಗೆ ಬೇಜಾರಿಲ್ಲ. ಟಾಟಾ, ಬಿರ್ಲಾದವರಿಗೆ 10-20 ಕೋಟಿ ಕೊಡಿ ಎಂದು ಹೇಳಿ, ಅದೇನೂ ದೊಡ್ಡ ಪ್ರಶ್ನೆಯಲ್ಲ. ಅದರಲ್ಲಿ ಕೆಲವು ಕಂಡೀಷನ್ಸ್ ಹಾಕಿ. ಯಾರ್‍ಯಾರು ದೊಡ್ಡ ದೊಡ್ಡ ಜನ ಬೇರೆ ಕಡೆಯಿಂದ ಇಲ್ಲಿ ಇಂಡಸ್ಟ್ರಿ ಶುರು ಮಾಡುವುದಕ್ಕೆ ಬರುತ್ತಾರೆ,ಅವರು ಈ ಫಂಡ್‌ಗಾಗಿ ಇಷ್ಟು ಹಣ ಕೊಡಬೇಕು. ಎಂದು ಹೇಳಿ. ಇದರಲ್ಲಿ ಏನು ತಪ್ಪು ಇದೆ. ಒಳ್ಳೆಯ ಕೆಲಸ ಮಾಡಿದರೆ ಯಾರೂ ಬೇಡ ಎಂದು ಹೇಳುವುದಿಲ್ಲ, ಇಲ್ಲ ಎಂದು ಹೇಳುವುದಿಲ್ಲ. ಆದರೆ ಏನೂ ಮಾಡದೇ ಸುಮ್ಮನೆ ಪೊಳ್ಳು ಘೋಷಣೆ ಮಾಡುತ್ತಾ ಹೋದರೆ ಹೇಗೆ ? ಹಾಗಾಗಿ ತಾವು ಯಾವುದಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. 1.3.91ರಲ್ಲಿ ಗವರ್ನರ್ ಅಡ್ರೆಸ್‌ನಲ್ಲಿ ಹೇಳಿದ್ದೀರಿ. ಟ್ರಾಫಿಕ್ ಕನ್‌ಜನ್‌ಕ್ಷನ್ ದೂರಮಾಡಲಿಕ್ಕೆ 72 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೂರು ಸಬ್‌ವೇಸ್, ಎರಡು ಫ್ಲೈ ಓವರ್ಸ್ ಮಾಡುತ್ತೇವೆ. ಎಂದು ಹೇಳಿದ್ದೀರಿ. ಬಂಗಾರಪ್ಪನವರಿಗೆ ಬಹಳ ಹುರುಪು, ಅವರು ಬಹಳ ಆಂಬಿಷಯಸ್ ಮುಖ್ಯಮಂತ್ರಿಗಳು.

12.30 ಪಿ.ಎಂ

ಅವರು ತಮ್ಮ ಬಜೆಟ್ ಸ್ಪೀಚ್‌ನಲ್ಲಿ 314 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಕಾಂಪ್ರಹೆನ್ಸೀವ್ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಅನ್ನು ವರ್ಲ್ಡ್‌ಬ್ಯಾಂಕ್ ಸಹಾಯದಿಂದ ಮಾಡಿ ನಾಲ್ಕು ಸಬ್ ವೇಸ್ ನಾಲ್ಕು ಫ್ಲೈಓವರ್‌ಗಳನ್ನು ಮಾಡುತ್ತೇವೆ. In addition, Rs. 109 crores will be spent on Banglaore Transportation ಎಂದು ಹೇಳಿದರು. ಆದರೆ ಪರಿಸ್ಥಿತಿ ಏನಾಗಿದೆ? ಈ ಎರಡು ವರ್ಷಗಳಲ್ಲಿ ಎಷ್ಟು ಫ್ಲೈ ಓವರ್ ಕೆಲಸ ಶುರುವಾಗಿದೆ? ಎಷ್ಟು ಸಬ್‌ವೇಸ್ ಕೆಲಸ ಶುರುವಾಗಿದೆ? ಸಬ್‌ವೇಸ್ ಇಲ್ಲ, ಫ್ಲೈಓವರ್ ಕೂಡ ಇಲ್ಲ, ಸುಮ್ಮನೆ ಘೋಷಣೆ ಮಾಡುತ್ತಾ ಹೋಗುವುದು. ಇದನ್ನು ಹೇಳುವ ಅವಶ್ಯಕತೆಯಾದರೂ ಏನು? ಇದನ್ನು ಹೇಳುವ ಅವಶ್ಯಕತೆ ಇಲ್ಲ, ನಮ್ಮ ಕಾಲದಲ್ಲಿ ಶುರು ಆದ ರಿಂಗ್‌ರೋಡ್ ಇನ್ನೂ 67 ಕಿ.ಮೀ. ಆಗಬೇಕು. ಬಿಡಿಎಗೆ ಮಾಡಿ ಎಂದು ಹೇಳುತ್ತೀರಿ. ಇದು ಅಸಾಧ್ಯವಾದ ಮಾತು. ಇನ್ನು ಹತ್ತು ವರ್ಷಗಳಾದರೂ ಬಿಡಿಎ ದವರಿಂದ ಈ ಕೆಲಸವನ್ನು

ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ಅವರ ಹತ್ತಿರ ಹಣ ಇಲ್ಲ, ಆದುದರಿಂದ ಯಾವುದಾದರೂ ಪ್ರಾಧಾನ್ಯತೆಯ ಮೇಲೆ ನೀವು ಇದನ್ನು ಮಾಡಬೇಕು. ವಿಶ್ವಬ್ಯಾಂಕ್‌ನ ಅಸಿಸ್ಟನ್ಸ್ ತೆಗೆದುಕೊಳ್ಳಿ, ಎಲ್‌ಐಸಿ ಯವರ ಸಹಾಯ ತೆಗೆದುಕೊಳ್ಳಿ, ಸರಕಾರದಿಂದ ತೆಗೆದುಕೊಳ್ಳಿ, ಕೇಂದ್ರ ಸರಕಾರದಿಂದ ತೆಗೆದುಕೊಳ್ಳಿ, ಹೇಗಾದರೂ ರಿಂಗ್‌ರೋಡನ್ನು ಪ್ರಾಧಾನ್ಯತೆಯ ಮೇಲೆ ಮಾಡಿ ಮುಗಿಸಿ. ಇದರಿಂದ ಟ್ರಾಫಿಕ್ ಕಂಜಕ್ಷನ್ ಬಹಳ ಕಡಿಮೆಯಾಗುತ್ತದೆ. ಟ್ರಾಫಿಕ್ ಔಟ್‌ಸೈಡ್‌ನಲ್ಲಿ ಹೋಗಬಹುದು. ಅದಕ್ಕೆ ತಾವು ಏನೂ ಪ್ರಾಧಾನ್ಯತೆ ಕೊಡುತ್ತಾ ಇಲ್ಲ. ರಿಂಗ್ ರೋಡ್ ಸಮಸ್ಯೆಯನ್ನು ಪರಿಶೀಲನೆ ಮಾಡಲು, ಸರ್ಭ್‌ವೇ ಮಾಡುವುದಕ್ಕಾಗಿ ನಿಮ್ಮ ಅಧ್ಯಕ್ಷತೆಯಲ್ಲಿ ಎಷ್ಟು ಸಭೆಗಳನ್ನು ಮಾಡಿದ್ದೀರಿ? ಅರ್ಬನ್‌ಲ್ಯಾಂಡ್ ಸೀಲಿಂಗ್ ಆಕ್ಟ್‌ನ್ನು ಎಲ್ಲರೂ ಮಾಡುತ್ತಾರೆ, ಅದರಲ್ಲಿ ಬಲ್ಕ್ ಅಲಾಟ್‌ಮೆಂಟ್ ಹೇಗೆ ಮಾಡಬೇಕು ಎನ್ನುವುದು. ನಮಗೂ ಗೊತ್ತು. ನಿಮಗೂ ಗೊತ್ತು. ಆದರೆ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ, ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ನಿಮ್ಮ ಅಧ್ಯಕ್ಷತೆಯಲ್ಲಿ ಎಷ್ಟು ಸಾರಿ ಸಭೆ ಮಾಡಿದ್ದೀರಿ? ಬೆಂಗಳೂರಿನಲ್ಲಿ ಬೆಂಗಳೂರಿನ ಸಮಸ್ಯೆಗಳನ್ನು ಬಗೆಹರಿಸಬೇಕು, ಸಬ್‌ವೇಸ್ ಮಾಡಬೇಕು, ರಿಂಗ್‌ರೋಡ್ ಮುಗಿಸಬೇಕು, ಫ್ಲೈಓವರ್ಸ್ ಮಾಡಬೇಕು. ನನಗೆ ಗೊತ್ತಿರುವ ಹಾಗೆ, ಒಂದೂ ಕೆಲಸ ಆಗಿಲ್ಲ, ಏಕೆಂದರೆ ಯಾರಿಗೂ ಇದರಲ್ಲಿ ಆಸಕ್ತಿ ಇಲ್ಲ. ಹಾಗಾಗಿ ನಮ್ಮ ಬೆಂಗಳೂರು ನಗರದ ಕೆಲವು ಸಮಸ್ಯೆಗಳು ಏನಿವೆ ಅವುಗಳನ್ನೂ ಬಗೆಹರಿಸಲಿಕ್ಕೆ ನಾನು ಕೆಲವು ಸಲಹೆಗಳನ್ನು ಮಾಡುತ್ತಾ ಇದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ, ಕಾವೇರಿ ಮೂರನೇ ಹಂತದ ಕೆಲಸವನ್ನು ಆಧ್ಯತೆಯ ಮೇಲೆ ಮುಗಿಸಿ. ಅದೇ ರೀತಿಯಲ್ಲಿ 4ನೇ ಹಂತವನ್ನು ಕೂಡ ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ. ಅದೇ ಪ್ರಕಾರ ಈ ರಸ್ತೆಗಳನ್ನು ಬ್ರಾಡನಿಂಗ್ ಮಾಡುವ ಕೆಲಸ, ಇದ್ದ ರಸ್ತೆಗಳನ್ನು ಅಭಿವೃದ್ಧಿ ಮಾಡುವ ಕೆಲಸ ಏನಿದೆ ಇದಕ್ಕೂ ಹೆಚ್ಚಿನ ಗಮನ ಹಾಗೂ ಆದ್ಯತೆಯನ್ನು ತಾವು ಕೊಡಬೇಕಾಗುತ್ತದೆ. ಈ ಫ್ಲೈಓವರ್ಸ್ ಮತ್ತು ಸಬ್‌ವೇಸ್ ಮಾಡುವ ವಿಚಾರದಲ್ಲಿ ಇವೊತ್ತು ಸರಕಾರದ ಹತ್ತಿರ ಅಷ್ಟು ಕೆಲಸ ಮಾಡುವುದಕ್ಕೆ ಹಣ ಇರಲಾರದು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಗರಸಭೆಯವರ ಹತ್ತಿರವೂ ಹಣ ಇಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. Involve the private sector. No wrong. ಇವೊತ್ತು ನಮಗೆ ಸಮಸ್ಯೆಗಳನ್ನು ಬಗೆಹರಿಸುವುದು ಮುಖ್ಯವೇ ವಿನಹ ಯಾರು ಕೆಲಸ ಮಾಡಿದರು ಎಂಬುದು ಮುಖ್ಯವಲ್ಲ. Involve the private sector. ನಾನು ನೋಡಿದ್ದೇನೆ. ಬಹಳಷ್ಟು ಕಡೆಗಳಲ್ಲಿ ಪ್ರೈವೇಟ್ ಸೆಕ್ಟರ್‌ನ್ನು ಇನ್‌ವಾಲ್ವ್ ಮಾಡಿ ಸಬ್‌ವೇಸ್, ಫ್ಲೈಓವರ್‌ಗಳನ್ನು ಮಾಡಿದ್ದಾರೆ. ಅವರು 5-10 ವರ್ಷಗಳವರೆಗೆ ಟೋಲ್ ಕಲೆಕ್ಟ್ ಮಾಡಬೇಕು, ಅದನ್ನೂ ಅವರು ಮಾಡಲಿ. Let us have a practical view about it. ಈ ಕೆಲಸಗಳನ್ನು ಹಾಗೆ ಇಡುವ ಕಾರಣ ಇಲ್ಲ. ಆದ್ದರಿಂದ ಈ ಬಗ್ಗೆ ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬಹುದು, ಆದರಿಂದ ಯಾವುದೇ ಬೇಜಾರು ಇಲ್ಲ, ಬೇಜಾರು ಪಟ್ಟುಕೊಳ್ಳುವ ಕಾರಣವೂ ಇಲ್ಲ. ಕೆಲವು ಜನರ ಹೇಳಬಹುದು, ಜಾರ್ಜ್ ಸಾಹೇಬರು ಇದನ್ನು ಪ್ರೈವೇಟ್‌ನವರಿಗೆ ಕೊಟ್ಟರು 10-20 ಕೋಟಿ ರೂಪಾಯಿಗಳನ್ನು ತಿಂದರು ಎಂದು ಅಲಿಗೇಶನ್ ಮಾಡಬಹುದು. ಅದನ್ನು ಕೇರ್ ಮಾಡಬೇಡಿ. ನಿಮಗೆ ಇವತ್ತಲ್ಲ ನಾಲ್ಕೈದು ವರ್ಷಗಳಲ್ಲಿ ಒಳ್ಳೆಯ ಹೆಸರು ಬರಬಹುದು. ನಮಗೆ ಸಮಸ್ಯೆ ಬಗೆಹರಿಸುವುದೇ ಮುಖ್ಯವಾದುದೇ ವಿನಹ ಸಮಸ್ಯೆಗಳನ್ನು ನಿರ್ಮಾಣ ಮಾಡುವುದಿಲ್ಲ.

ಆ ದೃಷ್ಟಿಯಿಂದ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇವೊತ್ತು ಬೆಂಗಳೂರು ನಗರದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಾ ಇದೆ. ಎಲ್ಲಿಯತನಕ ತಾವು

ಸೆಟಲೈಟ್‌ಟೌನ್‌ಗಳ ಬಗ್ಗೆ ವಿಚಾರ ಮಾಡುವುದಿಲ್ಲವೋ, ಅಲ್ಲಿಯ ತನಕ ಕುಡಿಯುವ ನೀರಿನ ಸಮಸ್ಯೆ, ಡೆವಲಪ್‌ಮೆಂಟ್ ಸಮಸ್ಯೆ, ನಿಮ್ಮಿಂದ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಕನಕಪುರದ ಕಡೆಯಾಗಲಿ, ತುಮಕೂರು ಕಡೆಯಾಗಲಿ, ಕೋಲಾರ ಕಡೆಯಾಗಲಿ, ಸೆಟಲೈಟ್‌ಟೌನ್ಸ್‌ನ್ನು ಡೆವಲಪಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಜನರು ಅಲ್ಲಿಗೆ ಹೋಗುತ್ತಾರೆ. ಬಾಂಬೆಯಲ್ಲಿ ಏನು ಪರಿಸ್ಥಿತಿ ಇದೆ? ಇವತ್ತು ಬಾಂಬೆಗೆ 40-50-60ಕಿ.ಮಿ. ದೂರದಿಂದಲೂ ಜನರು ಹೋಗುತ್ತಿದ್ದಾರೆ. ಪೂನಾದಿಂದಲೂ ಜನರು ಅಲ್ಲಿಗೆ ಕೆಲಸ ಮಾಡಲಿಕ್ಕೆ ಹೋಗುತ್ತಾರೆ. ಆದರೆ ಅದಕ್ಕೆ ಒಳ್ಳೆಯ ಟ್ರಾನ್ಸ್‌ಪೋರ್ಟ್ ಸಿಸ್ಟಂ ಇರಬೇಕಾಗುತ್ತದೆ. ನಿಮ್ಮಲ್ಲಿ ಒಳ್ಳೆಯ ಟಾನ್ಸ್‌ಪೋರ್ಟ್ ನೆಟ್ ವರ್ಕ್ ಇದ್ದರೆ ಇದೇನೂ ಕಷ್ಟವಾಗುವುದಿಲ್ಲ. ಇವೊತ್ತು ಬೆಂಗಳೂರಿನಲ್ಲಿ ಬಿಟಿಎಸ್ ಪರಿಸ್ಥಿತಿ ಹೇಗೆ ಇದೆ? ಅದರಲ್ಲಿ ಸರ್ವೀಸ್ ಮೋಟೀವ್ ಏನೂ ಇಲ್ಲ. ಹಾಗಾಗಿ ಟ್ರಾನ್ಸ್‌ಪೋರ್ಟ್ ಸಿಸ್ಟಂ ಅನ್ನು ಡೆವಲಪ್ ಮಾಡಿದರೆ ಈ ಕೆಲಸ ಸಾಧ್ಯವಾಗುತ್ತದೆ. ಆದುದರಿಂದ ಸೆಟ್‌ಲೈಟ್ ಟೌನ್ಸ್ ಡೆವಲಪ್‌ಮಾಡುವುದಕ್ಕೆ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇಲ್ಲವಾದರೆ ಈ ಸಮಸ್ಯೆ ಬಹಳ ಗಂಭೀರವಾಗಬಹುದು. ಕಾವೇರಿ, 3-4-5 ಹಂತಗಳಾದರೂ ಇದರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಆಮೇಲೆ. ನಮ್ಮ ಬಿಎಂಆರ್‌ಡಿ ಏನಿದೆಯಲ್ಲ that has become a teethless organisation. ಯಾವ ಅಧಿಕಾರಿ ನಮಗೆ ಬೇಡ ಅವನನ್ನು ಅಲ್ಲಿಗೆ ಪೋಸ್ಟ್ ಮಾಡುವುದು. ಆ ಇಲಾಖೆಗೆ ಎಷ್ಟು ಮಹತ್ವ ಇದೆ ಅದರ ಬಗ್ಗೆ ಯಾರೂ ವಿಚಾರ ಮಾಡಿಲ್ಲ.

ಒಂದು ಕುರ್ಚಿ ಒಂದು ಟೇಬಲ್ ಕೊಟ್ಟಿದ್ದೇವೆ, ಒಬ್ಬ ಪ್ಯೂನ್ ಕೊಟ್ಟಿದ್ದೇವೆ, ಅವನು ಸೀದಾ ಅಲ್ಲಿ ಕುಳಿತುಕೊಂಡಿರುತ್ತಾನೆ. ಆದರೆ ಇವತ್ತು Bangalore Metropolitan Regional Development Authority ಏನಿದೆ ಇದರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಇದಕ್ಕೆ ಸರಿಯಾದ ಶಕ್ತಿಯನ್ನು ತುಂಬಿದರೆ ಇದು ಸಾಕಷ್ಟು ಚೆನ್ನಾಗಿ ಬೆಂಗಳೂರು ಅಭಿವೃದ್ಧಿ ಮಾಡಲು ಸಾಧ್ಯ ಇದೆ. ನಾವು ಆ ಪ್ರಯತ್ನ ಮಾಡಿದ್ದೆವು. ಇವತ್ತು ಏನು ಕೋ-ಆರ್ಡಿನೇಷನ್ ಇದೆ ಕಾರ್ಪೋರೇಷನ್, ಬಿ.ಡಿ.ಎ ಸ್ಲಂ ಬೋರ್ಡ್, ವಾಟರ್ ಬೋರ್ಡ್, ಕೆಇಬಿ, there is absolutely no Co-ordination BMRD's responsibility is that.. ಇವತ್ತು ಹ್ಯಾಪಜಾರ್ಡಾಗಿ ಬಿಲ್ಡಿಂಗ್ಸ್ ಬರುತ್ತಾ ಇವೆ. ಕಾರ್ಪೋರೇಷನ್‌ನವರು ಬಿಲ್ಡಿಂಗ್‌ಗೆ ಪರ್ಮಿಷನ್ ಕೊಡುತ್ತಾರೆ. ಅಂಡರ್‌ಗ್ರೌಂಡ್ ಏನು ಮಾಡಬೇಕು ಎಂದರೆ ಕಾರ್ ಪಾರ್ಕಿಂಗ್ ಮಾಡಬೇಕೆನ್ನುತ್ತಾರೆ. ಆದರೆ ಅಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಬರುತ್ತವೆ. ಇದು ತಮ್ಮ ಗಮನಕ್ಕೆ ಬಂದಿರಬಹುದು ಇವರನ್ನು ಚೆಕ್ ಮಾಡುವವರು ಯಾರು ಕೇಳುವವರು ಯಾರು? ಎಲ್ಲಿಯತನಕ ಈ ಸಮಸ್ಯೆ ನಿಮಗೆ ಗೊತ್ತಾಗುತ್ತದೆ. ಅಲ್ಲಿಯ ತನಕ ಅಂದರೆ ಅಷ್ಟರಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಬಂದು ಬಿಡುತ್ತವೆ. ಹಾಗಾಗಿ ಈ ಟೌನ್‌ಪ್ಲಾನಿಂಗ್ ಆಕ್ಟ್ ಎನ್‌ಫೋರ್ಸ್ ಮಾಡುವುದಾಗಲಿ ಈ ಎಲ್ಲ ಸಂಸ್ಥೆಗಳನ್ನು ಕಂಟ್ರೋಲ್ ಮಾಡುವುದಾಗಲಿ, ಬಿಎಂಆರ್‌ಡಿ ಮಾಡಲಿಕ್ಕೆ ಸಾಧ್ಯವಿದೆ. provided you give them teeth. Every month they will hold a meeting with all the agencies and BMRD will call that meeting. ಹೀಗೆ ಮಾಡಿದರೆ ಕೆಇಬಿ ಆಗಲಿ, ಕಾರ್ಪೋರೇಷನಾಗಲಿ, ಬಿಡಿಎ ಆಗಲಿ, ಇಸ್ಲಂ ಬೋರ್ಡಾಗಲಿ, ವಾಟರ್ ಬೋರ್ಡ್‌ಆಗಲಿ they will be brought under one umbrella and all senior most Officers must be members not the Executive

Engineers or the Chief Engineers. Chairman KEB must be a member, Corporation Commissioner must be a member. HUD Secretary should be there. ಹೀಗೆ ಮಾಡಿದರೆ ಬೆಂಗಳೂರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ನಾನ್ ಅಫೀಶಿಯಲ್ಸ್ ಸೇರಿಸುವುದೇನು ಬೇಡವೇ?

ಶ್ರೀ ಆರ್.ವಿ. ದೇಶಪಾಂಡೆ : ಇದು ನಾನ್ ಅಫೀಶಿಯಲ್ಸ್ ಸಂಸ್ಥೆಯಲ್ಲ. ನಾನ್ ಅಫೀಶೀಯಲ್ಸ್‌ಗೆ ಬೇರೆ ಬೇರೆ ಸಂಸ್ಥೆಗಳಿವೆ. ನಾನು ಕೋ-ಆರ್ಡಿನೇಷನ್ ಬಗ್ಗೆ ಹೇಳುತ್ತಿದ್ದೇನೆ. ಕೋ-ಆರ್ಡಿನೇಷನ್ ಇಲ್ಲದೇ ಹೋದರೆ ನೀವು ಹೋಗಿ ಏನು ಮಾಡುತ್ತೀರಿ? ಆದ್ದರಿಂದ ಇವರಿಗೆ ಹೆಚ್ಚಿನ ಅಧಿಕಾರ ಕೊಡಬೇಕು ಮತ್ತು ಸೆಂಟ್ರಲ್ ಅಸಿಸ್ಟೆನ್ಸ್ ಪಡೆದುಕೊಳ್ಳಲಿಕ್ಕೆ ಪ್ಲಾನಿಂಗ್ ಕಮೀಷನ್ ಮೇಲೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿ, ತಾವು ಹಣ ತಂದು ಬೆಂಗಳೂರು ನಗರದ ಸಮಸ್ಯೆ ಬಗೆಹರಿಸಲಿಕ್ಕೆ ಪ್ರಯತ್ನ ಮಾಡಿರಿ. ಇವತ್ತು ಬೆಂಗಳೂರಿನಲ್ಲಿ ಮತ್ತೊಂದು ಸಮಸ್ಯೆ ಇದೆ. ಪ್ಲೇಗ್ರೌಂಡ್ಸ್ ಮತ್ತು ಪಾರ್ಕ್ಸ್ ಇವು ಬಿಡಿಎ ಮತ್ತು ಕಾರ್ಪೋರೇಷನ್ ಪೊಜಿಷನ್‌ನಲ್ಲಿವೆ. ಇವರಿಗೆ ಅವನ್ನು ಸರಿಯಾಗಿ ಮೇಂಟೇನ್ ಮಾಡುವ ಕೆಪ್ಯಾಸಿಟಿ ಇಲ್ಲ. ಇವತ್ತು ಎನ್‌ಕ್ರೋಚ್‌ಮೆಂಟ್ ನಡೆಯುತ್ತಾ ಇದೆ ಇದು ಎಲ್ಲಿ ಆಗುತ್ತಿದೆ ಎಂದು ಅಧಿಕಾರಿಗಳಿಗೂ ಗೊತ್ತಿಲ್ಲ. ಅದಕ್ಕಾಗಿ ನಾನು ಸಜೆಸ್ಟ್ ಮಾಡುತ್ತಿದ್ದೇನೆ. ಯಾವುದಾದರೂ ಇಂಡಸ್ಟ್ರೀಸ್ ವಾಲಂಟರಿ ಆರ್ಗನೈಜೇಶನ್ಸ್ ಮುಂದೆ ಬಂದರೆ ಅವರಿಗೆ ಮೇಂಟೇನ್ ಮಾಡಲಿಕ್ಕೆ ಕೊಡಿರಿ. you give them for maintenance. No wrong. ದೊಡ್ಡ ದೊಡ್ಡ ಸಿಟಿಗಳಲ್ಲಿ ನೀವು ನೋಡಿರಬಹುದು. ಡೆಲ್ಲಿಯಲ್ಲಿ ಬಾಂಬೆಯಲ್ಲಿ ಕಲ್ಕತ್ತಾದಲ್ಲಿ they are maintaning circles. No wrong. ಕೆಲವು ಜನರಿಗೆ ಪಬ್ಲಿಸಿಟಿ ಬೇಕಾಗಿರುತ್ತದೆ. ಮಾಡಿಕೊಳ್ಳಲಿ ನಮಗೇನು? At least Bangalore people will have good garden, good playgrounds, good parks. ಆ ದೃಷ್ಟಿಯಿದ ಎಲ್ಲೆಲ್ಲಿ ಪ್ಲೈಗ್ರೌಂಡ್ಸ್ ಪಾರ್ಕ್ಸ್ ಇವೆ, ಎಲ್ಲೆಲ್ಲಿ ಕಾರ್ಪೋರೇಷನ್, ಬಿಡಿಎಗೆ ಮೇಂಟೇನ್ ಮಾಡಲಿಕ್ಕೆ ಸಾಧ್ಯವಿಲ್ಲ, ಹಣದ ತೊಂದರೆ ಇದೆ ಅಲ್ಲಿ ಈ ರೀತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಬೆಂಗಳೂರಿನಲ್ಲಿ ಮತ್ತೊಂದು ಸಮಸ್ಯೆ ಇದೆ. ಸರಿಯಾದ ಸಂಖ್ಯೆ ನನಗೆ ನೆನಪಿಲ್ಲ 52, 54 ಬಿಡಿಎ ಲೇಔಟ್ಸ್, They are still not transferred to the Corporation. ನಾನು ಮಿನಿಸ್ಟರಿದ್ದಾಗ ಅದಕ್ಕೆ ಒಂದು ಡೆಡ್‌ಲೈನ್ ಹಾಕಿದ್ದೆ, ಇಷ್ಟನೇ ತಾರೀಖಿನೊಳಗೆ ಇಂಥಾದ್ದು ಟ್ರಾನ್ಸ್‌ಫರ್ ಆಗಲೇಬೇಕು ಎಂದು, ಈಗ ಆಗಿದೆಯೋ ಇಲ್ಲವೋ ನನಗೆ ಮಾಹಿತಿ ಇಲ್ಲ. ಆದಷ್ಟು ಬೇಗ ಅವರಿಗೆ ಟ್ರಾನ್ಸ್‌ಫರ್ ಮಾಡಿಸಿ. ಇಂದು ಬೆಂಗಳೂರು ಪ್ರಾಧಿಕಾರಕ್ಕೂ ಆಯವಿಲ್ಲ, ಕಾರ್ಪೋರೇಷನ್‌ಗೂ ಆದಾಯವಿಲ್ಲ. ತಾಯಿಲ್ಲ ತಂದೆಯಿಲ್ಲ. ಹೀಗಾಗಿ ಲೇಔಟ್ ಟ್ರಾನ್ಸ್‌ಫರ್ ಮಾಡುವುದಾಗಲಿ, ಈ ಎಲ್ಲ ಸಮಸ್ಯೆಗಳಿಗೆ ನಾನು ಏನು ಸಜೆಷನ್ ಮಾಡಿದ್ದೇನೆ, ಆ ತರಹ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಬೆಂಗಳೂರು ಪಟ್ಟಣದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ಆಮೇಲೆ ನಾವು 20 ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಮಾಡಿದೆವು, ಕಳೆದ ಸಾರಿ ನಾವು ಹೇಳಿದ್ದೆವು. ಇದು ನಮ್ಮ ಕಡೆಯಿಂದ ತಪ್ಪಾಗಿದೆ. ಇವೆಲ್ಲ ವೈಟ್ ಎಲಿಫೆಂಟ್ಸ್ಆಗಿವೆ, ಇದಕ್ಕೆ ಏನೂ ಕೆಲಸವಿಲ್ಲ, ಇವುಗಳಲ್ಲಿ 12 ಅಥವಾ 14 ಮುಚ್ಚಿಬಿಡಿರಿ ಎಂದು ಹೇಳಿದ್ದೆ. ಮಡಿಕೇರಿ, ಚಿಕ್ಕಮಗಳೂರು

ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಏನು ಕೆಲಸ ಇದೆ? ಅವರ ರಿಪೋರ್ಟ್ಸ್ ಇವೆ ಅದನ್ನು ತಾವೇ ತೆಗೆದುನೋಡಿ ಅವರು ಸೈಟ್ ಕೊಟ್ಟಿದ್ದಾರೆಯೇ ಮನೆ ಕೊಟ್ಟಿದ್ದಾರೆಯೇ? They are doing nothing. Only they are just doing harassment. ನೀವ್ಯಾಕೆ ಇವುಗಳನ್ನು ಮಾಡಿದಿರಿ. ಎಂದು ತಾವು ಕೇಳಬಹುದು. ನಮಗೂ ರಿಸರ್ವೇಶನ್ ಇತ್ತು, ಕೆಲವುರು ಸಲಹೆ ಕೊಟ್ಟು ಅವನ್ನು ಎಕ್ಸ್‌ಪಿರಿಮೆಂಟ್ ಮಾಡಿ ನೋಡಿ ಎಂದು ಹೇಳಿದರು. ಡೆವಲಪ್‌ಮೆಂಟ್ ಅಥಾರಿಟೀಸ್ ಮಾಡಿದರೆ ಕೋ-ಆರ್ಡಿನೇಟ್ ಮಾಡಬಹುದು. ಸರಿಯಾಗಿ, ಪ್ಲಾನ್ಡ್ ಆಗಿ ಗ್ರೋತ್ ಆಗಬಹುದು ಎನ್ನುವ ಅಭಿಪ್ರಾಯ ಬಂತು. ಅದರಂತೆ ಈ ಅಥಾರಿಟಿಸನ್ನ ನಾವು ಮಾಡಿದ್ದೇವೆ, ಆದರೆ ಇವತ್ತು ಅವುಗಳಿಗೆ ಕೆಲಸ ಇಲ್ಲ. Unnecessarily we are spending money. ಸಿಬ್ಬಂದಿ ಮೇಲೆ, ಗಾಡಿ ಮೇಲೆ, ಛೇರ್ಮನ್ ಮೇಲೆ ಖರ್ಚು ಬರುತ್ತದೆ. ಇವತ್ತು ಇನ್ನೂ ಛೇರ್ಮನನ್ನು ಅಪಾಯಿಂಟ್ ಮಾಡಿಲ್ಲ. ಛೇರ್ಮನ್ ಅವರನ್ನು ಅಪಾಯಿಂಟ್ ಮಾಡಿದರೆ ಐದಾರು ಸಾವಿರ ರೂಪಾಯಿಗಳ ಹಾನರರಿಯಂ ಅನ್ನು ಕೊಡಬೇಕು. ಹಾಗಾಗಿ ನೀವು ಇದನ್ನು ಬಂದ್ ಮಾಡಿ, ಅದನ್ನು ಬಂದ್ ಮಾಡಿ ಎಂದು ನಾನು ಹೇಳುತ್ತಿಲ್ಲ. 20 ಡೆವಲಪ್‌ಮೆಂಟ್ ಅಥಾರಿಟಿಗಳನ್ನು ತಾವು ಸ್ಟಡಿ ಮಾಡಿ. ಇವತ್ತು ಬೆಳಗಾಂ ಡೆವಲಪ್‌ಮೆಂಟ್ ಅಥಾರಿಟಿ ಬೇಕಾಗುತ್ತದೆ, ಧಾರವಾಡ-ಹುಬ್ಬಳ್ಳಿ ಬೇಕಾಗುತ್ತದೆ. ಕಾರವಾರದ್ದು ಬೇಕಾದರೆ ಸೀ-ಬರ್ಡ್‌ದು ಬೇಕಾಗುತ್ತದೆ. ನೀವು ಯಾವುದು ಬೇಕು, ಯಾವುದು ಬೇಡ ಎನ್ನುವುದನ್ನು ನಿರ್ಣಯ ಮಾಡಿ ನಾನು ಹೇಳುವುದಿಲ್ಲ, ಆದರೆ ಯಾವ ಡೆವಲಪ್‌ಮೆಂಟ್ ಅಥಾರಿಟಿಗೆ ಕೆಲಸವಿಲ್ಲ ಅದು ಬೇಡ. Some Development Authorities are white elephants. ಅವನ್ನು ಕ್ಲೋಸ್ ಮಾಡಿ ಹಿಂದೆ ಏನು ವ್ಯವಸ್ಥೆ ಇತ್ತು ಅದರಿಂದ ಸಾಕಷ್ಟು ಕೆಲಸವಾಗುತ್ತಿತ್ತು, ಇವತ್ತು ಕೆಲಸವಾಗುತ್ತಿಲ್ಲ, ಇವತ್ತು ಸಂಬಳಕ್ಕೆ ಅಡ್ಮಿನಿಸ್ಟ್ರೇಷನ್‌ಗೇ ಖರ್ಚು ಮಾಡುತ್ತಿದ್ದಾರೆ. ಇವತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಏನು ಮಾಡುತ್ತಿದೆ ಸ್ವಾಮಿ? ತಾವೇ ಹೇಳಿ? ನಿನ್ನೆ ಮೊನ್ನೆ ಯಾರೋ ಮಾತನಾಡುತ್ತಾ ಅದನ್ನು ಮುಚ್ಚಿಬಿಡಿ ಎಂದು ಹೇಳಿದರು. ನಿಜವಾಗಿ ಅದನ್ನು ಮುಚ್ಚಿಬಿಡಿ. ಏಕೆಂದರೆ, ಅಕ್ಚುಯಲ್ ಆಗಿ ಇನ್ನೂ ಯಾರೂ ಕೂಡಾ ಕೋರ್ಟ್‌ಗೆ ಹೋಗಿಲ್ಲ. ಇವತ್ತು ಅವರು ಯಾರಾದಾರೂ ಇವರ ಚೀಟಿಂಗ್ ಮೇಲೆ ಕೋರ್ಟ್‌ಗೆ ಹೋದರೆ everybody will be sued. ಇವರು ಏನು ಮಾಡಿದ್ದಾರೆ ಎಂದರೆ 1988ನೇ ಇಸವಿಯಿಂದ ಇವತ್ತಿನತನಕವೂ ಅಂದರೆ ಕಳೆದ ಮೂರು ವರ್ಷಗಳಲ್ಲಿ ಇವರು ಒಂದು ಸೈಟನ್ನು ಯಾರಿಗೂ ಕೊಟ್ಟಿಲ್ಲ, ಇವರು ಒಂದಾದರೂ ಸೈಟನ್ನು ಕೊಟ್ಟಿದ್ದೇವೆ ಎಂದು ಹೇಳಿದರೆ, I will resign from this House. ಒಂದು ಸೈಟನ್ನೂ ಕೊಟ್ಟಿಲ್ಲ, ಮೂರು ವರ್ಷಗಳಿಂದ 30 X 40 ಸೈಟನ್ನು ಕೂಡಾ ಕೊಟ್ಟಿಲ್ಲ 71 ಜನರಿಗೆ ಆಲ್‌ಟರ್‌ನೇಟಿವ್ ಸೈಟುಗಳನ್ನು ಕೊಟ್ಟಿದ್ದಾರೆ. But, for the last 3 years not a single site has been given. ಇದರ ಕೆಲಸ ಏನು? ಯಾವ ಪ್ರಕಾರವಾಗಿ ಇಲ್ಲಿ ಕೆಲಸ ನಡೆಯುತ್ತಿದೆ? 1988ನೇ ಇಸವಿಯಲ್ಲಿ ನಮ್ಮ ಸರ್ಕಾರವಿದ್ದಾಗ ನಾವು ಸೈಟುಗಳನ್ನು ಕೊಡಬೇಕು ಎಂದು ಅಡ್ವಟ್‌ರೈಜ್‌ಮೆಂಟ್ ಮಾಡಿದ್ದೆವು. 86-88 ಸಾವಿರ ಅಪ್ಲಿಕೇಷನ್ಸ್ ಬಂದಿವೆ. Crores and crores of rupees are lying with the BDA. What right BDA has got to keep that money? Has the BDA got legal and moral rights? ಇವತ್ತು ತಾವು ನಿರ್ಣಯವನ್ನು ಮಾಡಿಕೊಳ್ಳಿ. ಬಿ.ಡಿ.ಎ. ನವರು ಬರುವ ಮೂರುತಿಂಗಳಲ್ಲಿ ಆರು ತಿಂಗಳಲ್ಲಿಯೇ ಇವರಿಗೆ ಸೈಟನ್ನು ಕೊಡಬೇಕು

ಎಂದು ಮಾಡಿ. ಕೊಡಲಿಕ್ಕೆ ಆಗದಿದ್ದರೆ ವಿತ್ ಇಂಟರೆಸ್ಟ್ ಆ ಹಣವನ್ನು ರೀಫಂಡ್ ಮಾಡಿ.

ಶ್ರೀ ಆರ್. ದಯಾನಂದರಾವ್ : ನಿಮ್ಮ ಸರ್ಕಾರದಲ್ಲಿ ಖಜಾನೆ ಖಾಲಿ ಆಗಿತ್ತು.

ಶ್ರೀ ಆರ್.ವಿ. ದೇಶ್‌ಪಾಂಡೆ : ತಪ್ಪು ಮಾಡಿ ನಾವು ಇಲ್ಲಿಗೆ ಬಂದಿದ್ದೇವೆ. ನೀವು ಅದನ್ನೂ ಏತಕ್ಕೆ ಮಾಡುತ್ತೀರಿ. ನೀವು ಆ ರೀತಿ ಮಾಡಬೇಡಿ ಎಂದು ನಾನು ಹೇಳುತ್ತಿದ್ದೇನೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ದಯಮಾಡಿ ಇದನ್ನು ಪರಿಶೀಲನೆಮಾಡಿ. ಇವತ್ತು ಬಿ.ಡಿ.ಎ. ಯಾವ ಪ್ರಕಾರವಾಗಿ ನಡೆಯುತ್ತಿದೆಯೆಂದರೆ, BDA is also a white elephant ಅಲ್ಲಿ ಬಹಳ ದೊಡ್ಡ machinery ಇದೆ. ಕಾರ್ನರ್ ಸೈಟುಗಳನ್ನು ಆಕ್ಷನ್ ಮಾಡುತ್ತಿದ್ದಾರೆ. ಕಳೆದ ವರ್ಷ corner ಸೈಟುಗಳನ್ನು ಹರಾಜು ಮಾಡಿ 25 ಕೋಟಿ ರೂಪಾಯಿಬಂದಿತ್ತು. ಕಾರ್ನಾರ್ ಸೈಟುಗಳನ್ನು ಹರಾಜು ಮಾಡುವುದು, ಪಬ್ಲಿಕ್ ಹಣವನ್ನು ಗಳಿಸುವುದು. ಈ ಎರಡರ ಮೇಲೆ ಇವತ್ತು ಬಿ.ಡಿ.ಎ. ನಡೆಯುತ್ತಿದೆಯೇ ಹೊರತು ಬೇರೆ ಏನೂ ಕೆಲಸ ಇಲ್ಲ. ಒಂದು ಎಕರೆ ಭೂಮಿಯನ್ನಾದರೂ ಅಕ್ವೈರ್ ಮಾಡಿದ್ದಾರೆಯೇ ಕೇಳಿ. ಕಳೆದ ಮೂರು ವರ್ಷಗಳಲ್ಲಿ ಬಿ.ಡಿ.ಎ.ನಿಂದ ಒಂದೇ ಒಂದು ಎಕರೆ ಭೂಮಿ ಅಕ್ವೈರ್ ಆಗಿಲ್ಲ. ಬಿ.ಡಿ.ಎ.ಗೆ ಯಾರಿಗೆ ಮನೆ ಬೇಕು, ಯಾರಿಗೆ ನಿವೇಶನ ಬೇಕು, ಅವರುಗಳು ಅರ್ಜಿಗಳನ್ನು ಹಾಕಿದ್ದಾರೆ, ಆ ಹಣದಿಂದ ಮತ್ತು ಕಾರ್ನರ್ ಸೈಟುಗಳ ಹರಾಜಿನಿಂದ ಬಂದಂಥ ಹಣದಲ್ಲಿ ಇವತ್ತು ಇವತ್ತು ಬಿ.ಡಿ.ಎ. ನಡೆಯುತ್ತಿದೆ. ಆದುದರಿಂದ ಆದಷ್ಟು ಬೇಗ ಫರ್ಮ್ ಡಿಸಿಷನನ್ನು ತೆಗೆದುಕೊಂಡು ಈ ಸಂಸ್ಥೆಯನ್ನು ಮುಚ್ಚಿ ಅಥವಾ ಅವರ ಮೇಲೆ ಆಬ್ಲಿಗೇಷನನ್ನು ಹಾಕಿ, ಆರು ತಿಂಗಳ ಒಳಗಡೆಯೋ, ಎಂಟು ತಿಂಗಳ ಒಳಗಡೆಯೋ ಸೈಟುಗಳನ್ನು ಕೊಡಿ ಎಂದು ಒಂದು ನಿರ್ಣಯವನ್ನು ತೆಗೆದುಕೊಳ್ಳಿ ಮತ್ತು ಸೈಟುಗಳನ್ನು ಕೊಡುವುದಕ್ಕೆ ಬರುವುದಿಲ್ಲ ಎಂದರೆ ತೊಂದರೆ ಇದ್ದರೆ ಆ ಹಣವನ್ನು ವಿತ್ ಇಂಟರೆಸ್ಟ್ ರೀಫಂಡ್ ಮಾಡಿ. ಕಳೆದ ಮೂರು ವರ್ಷಗಳಲ್ಲಿ ಎಷ್ಟು ಭೂಮಿ ಅಕ್ವೈರ್ ಆಗಿದೆಯೆಂದು ನೀವು ಹೇಳಬೇಕು. ಬಿ.ಡಿ.ಎ. ಅವರು ಆರೇಳು ಲೇಔಟ್ಸ್‌ಗಳನ್ನು ಮಾಡುತ್ತೇವೆ. ಇದಕ್ಕೆ ನೂರಾರು ಎಕರೆ ಭೂಮಿಯನ್ನು ಅಕ್ವೈರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ..

ಶ್ರೀ ವಾಟಾಳ್ ನಾಗರಾಜ್ : ಇವತ್ತು ಈ ಬೇಡಿಕೆ ಮೇಲೆ ಇಂಥ ಗಂಭೀರವಾದ ಚರ್ಚೆ ಪ್ರಾರಂಭವಾಗಿದೆ. ಈ ಸಭೆಯಲ್ಲಿ ಕೋರಂ ಇಲ್ಲ. ಈ ಸದಸ್ಯರುಗಳು ಎಲ್ಲಿ ಹೋದರು?

ಶ್ರೀ ಆರ್.ವಿ. ದೇಶಪಾಂಡೆ : ಹೀಗಾಗಿ ನಾನು ನಿಮಗೆ ಏನು ಹೇಳುತ್ತಿದ್ದೇನೆ ಎಂದರೆ, ಇವತ್ತು ಇದರ ಬಗ್ಗೆ ಇನ್ನೊಮ್ಮೆ ವಿಚಾರವನ್ನು ಮಾಡಿ You see the proceedings. ನಾವು ಒಂದು ಡಿಸಿಷನನ್ನು ತೆಗೆದುಕೊಂಡಿದ್ದೆವು. ಬಿ.ಡಿ.ಎ.ಗೆ ಹೋಗಿ ಡಿಸಿಷನ್ ತೆಗೆದುಕೊಂಡಿದ್ದೆವು. ಅಕ್ವಿಜಿಷನ್ 4(1) ಮಾಡುವುದಕ್ಕಿಂತ ಮುಂಚೆ ಹತ್ತು ಬಾರಿ ವಿಚಾರವನ್ನು ಮಾಡಿ. Think 10 times before you issue 4(1) notification. ಸ್ಪಾಟ್ ನೋಡಿ. ಅಲ್ಲಿ ದವಾಖಾನೆ ಇದೆಯೋ ಅಲ್ಲಿ ಆಸ್ಪತ್ರೆ ಇದೆಯೋ ಅಲ್ಲಿ ಚರ್ಚ್ ಇದೆಯೋ ಅಲ್ಲಿ ದೇವಸ್ಥಾನ ಇದೆಯೋ ಎಂದು ನೋಡಿ ಹಾಗೇನಾದರೂ ಇದ್ದರೆ ಮಾಡುವುದಕ್ಕೆ ಹೋಗಬೇಡಿ. ಆದರೆ ಒಮ್ಮೆ ಮಾಡಿದನಂತರ there shall be no de-notification. ನಾವು ಏನಾದರೂ ಡೀನೋಟಿಫೈ ಮಾಡಿದ್ದೇವೆಯೇ ಎಂದು

you find out from my records. ಇವತ್ತು ಏನಾಗಿದೆಯೆಂದರೆ, 4(1) ನೋಟಿಫಿಕೇಷನ್ ಮಾಡುವುದು.

4(1) ನೋಟಿಫಿಕೇಶನ್ ಮಾಡುವುದರಿಂದ ಹಣ ತೆಗೆದುಕೊಂಡು ಡ್ರಾಪ್ ಮಾಡಿ ಎಂದು ಜನ ಬರುತ್ತಾರೆ. ಆಗ ಹಣ ತೆಗೆದುಕೊಳ್ಳುವುದು ಡ್ರಾಪ್ ಮಾಡುವುದು. to the best of my knowledge ಕಳೆದ ಎರಡು ವರ್ಷಗಳಲ್ಲಿ ಎರಡೂವರೆ ಸಾವಿರದಿಂದ ಮೂರು ಸಾವಿರ ಎಕರೆ ಭೂಮಿಯನ್ನು ಡೀ-ನೋಟಿಫೈ ಮಾಡಿದ್ದಾರೆ. ಒಂದು ಎಕರೆ ಭೂಮಿಯನ್ನು ಅಕ್ವೈರ್ ಮಾಡಲಿಕ್ಕೆ ಆಗಿಲ್ಲ. ಒಬ್ಬರಿಗೂ ಒಂದು ಸೈಟ್ ಕೊಡಲಿಕ್ಕೆ ಆಗಿಲ್ಲ. ಹಾಗಾದರೆ ಬಿಡಿಎ ಪರಿಸ್ಥಿತಿ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲ್ಯಾಂಡ್ ಅಕ್ವಿಜಿಷನ್ ಮಾಡತಕ್ಕದ್ದು ಬಹಳ ಕಷ್ಟ ಎಂದು ತಿಳಿದುಕೊಂಡೇ ನಾವು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದು ಬಿ.ಡಿ.ಎ. ನೇರವಾಗಿ ಲ್ಯಾಂಡನ್ನು ಪರ್ಚೇಸ್ ಮಾಡಿ ಇಮ್ಮಿಡಿಯಟ್‌ಲಿ ಸೈಟ್ಸ್ ಮಾಡತಕ್ಕ ವ್ಯವಸ್ಥೆ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಬಿ.ಡಿ.ಎ. ಹೌಸಿಂಗ್ ಬೋರ್ಡ್ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ throughout the State ಇದೆ ಇದನ್ನು first time ಮೊನ್ನೆ ಇಷ್ಯೂ ಮಾಡಿದ್ದೇವೆ. ಇದಾದ ಮೇಲೆ ಬಹುಶಃ ಲ್ಯಾಂಡ್ ಅಕ್ವಿಜಿಷನ್ ಪ್ರಾಬ್ಲಮ್ ಹೆಚ್ಚಿಗೆ ಬರುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮತ್ತೆ ನಿಮ್ಮ ಆಫೀಸರ್ ಕೋರ್ಟ್‌ನಲ್ಲಿ ಮೊಕದ್ದಮೆ ಇದೆ. ಹೈಕೋರ್ಟ್‌ನಲ್ಲಿ ಸ್ಟೇ ಇದೆ. ಸಿವಿಲ್ ಕೋರ್ಟ್‌ನಲ್ಲಿ ಸ್ಟೇ ಇದೆ. ಎಂದು ಹೇಳುತ್ತಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ದೇಶಪಾಂಡೆಯವರು 2500-3000 ಎಕರೆ ಡೀ-ನೋಟಿಫೈ ಮಾಡಿದ್ದಾರೆ. ಎಂದು ಹೇಳುತ್ತಿದ್ದಾರೆ. ತಮ್ಮ ಹತ್ತಿರ ಡಾಕ್ಯುಮೆಂಟ್ಸ್ ಇಟ್ಟುಕೊಂಡು ಹೇಳುತ್ತಿದ್ದಾರೋ ಹೇಗೆ ಏಕೆಂದರೆ,ನಾಳೆ ಇದೇ ದೊಡ್ಡದಾಗಿ ಪತ್ರಿಕೆಯಲ್ಲಿ ಬರುತ್ತದೆ ದಯವಿಟ್ಟು...

ಶ್ರೀ ಆರ್.ವಿ. ದೇಶಪಾಂಡೆ : ನೀವು ಫ್ಯಾಕ್ಸ್ ಕೊಡಿ. ಮಾಡಿಲ್ಲ ಎಂದು ಹೇಳಿ I will accept it. ನಾನು ವಿರೋಧಪಕ್ಷದಲ್ಲಿದ್ದೇನೆ. ನನಗೆ ಸರ್ಕಾರದಿಂದ ಯಾವುದೇ ಕಾಗದ ಸಿಗುವುದಿಲ್ಲ. ನಾನು ಪ್ರಯತ್ನ ಮಾಡುವುದಿಲ್ಲ. ಯಾವುದಾದರೂ ಆಫೀಸಿನಲ್ಲಿ ಬೇಕಾದರೆ ಫೋನ್ ಮಾಡಿ ಕೇಳಿ, ನಾನು ಪ್ರಯತ್ನವನ್ನು ಮಾಡಿಲ್ಲ. There are so many Officers who have worked under me. ಅದಕ್ಕೆ ನಾನು ಪ್ರಯತ್ನ ಮಾಡಿಲ್ಲ.

ಶ್ರೀ ಕೆ.ಜೆ. ಜಾರ್ಜ್ ; ಮಾನ್ಯ ದೇಶಪಾಂಡೆಯವರೆ ನಾನೇಕೆ ತಮ್ಮನ್ನು ಕೇಳುತ್ತಿದ್ದೇನೆಂದರೆ, ತಮ್ಮ ಹತ್ತಿರ ಡಾಕ್ಯುಮೆಂಟ್ ಇಟ್ಟುಕೊಂಡು ಹೇಳುವುದಾದರೆ ಪರವಾಗಿಲ್ಲ, ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಆದರೆ ನಾಳೆ ಬೆಳಿಗ್ಗೆ ಪತ್ರಿಕೆಯಲ್ಲಿ ಇದೇ ಬರುತ್ತದೆ. 2500-3000 ಎಕರೆ ಡೀ-ನೋಟಿಫೈ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬರುತ್ತದೆ. ಆದ್ದರಿಂದ ದಯವಿಟ್ಟು...

ಶ್ರೀ ಆರ್.ವಿ. ದೇಶಪಾಂಡೆ : ನೀವು Deny ಮಾಡಿದರೆ ಅದು ನೆಕ್ಸ್ಟ್ ಡೇ ಬರುತ್ತದೆ. ನಾನೇನು ಪಬ್ಲಿಸಿಟಿಗಾಗಿ ಹೇಳುತ್ತಿಲ್ಲ. ಅದರಲ್ಲಿ ನನಗೇನೂ ಇಂಟರೆಸ್ಟ್‌ಇಲ್ಲ. ಪಬ್ಲಿಸಿಟಿ ಬಗ್ಗೆ ನಾನು ಪ್ರಯತ್ನವನ್ನು ಮಾಡುವುದಿಲ್ಲ. because I am not interested. ಇವತ್ತು ಕೋರ್ಟ್ ಸ್ಟೇ ಇದೆ. ಎಂದು ಹೇಳುತ್ತಾರೆ, ಅದು ಇದೆ, ಆದರೆ ಎಷ್ಟು

ವರ್ಷಗಳಿಂದ ಇದೆ ಬಿ.ಡಿ.ಎ. ನ್ಯಾಷಾನಲ್ ಆಫ್ ಲಾಯರ್ಸ್ ಯಾರಿದ್ದಾರೆ ಅವರು ಏನೇನು ಮಾಡುತ್ತಿಲ್ಲ, ಪ್ರೈವೇಟ್ ಪಾರ್ಟೀಸ್ ಇದ್ದರೆ ವೆಕೇಟ್ ಏಕೆ ಮಾಡಿಕೊಳ್ಳುತ್ತಾರೆ. ಬಿ.ಡಿ.ಎ.ದು 5-6 ವರ್ಷಗಳಾದರೂ ಏಕೆ ವೆಕೇಟ್ ಆಗುವುದಿಲ್ಲ. Because in majority of the Cases, they are hand in glove. ಶಾಸಕರಿಗೆ ಸೈಟುಗಳನ್ನು ಕೊಟ್ಟಿದ್ದೇವೆ. ನಾನೇ ಹೆಚ್.ಯು.ಡಿ. ಮಿನಿಸ್ಟರ್ ಆಗಿದ್ದಾಗ, ಶಾಸಕರಿಗೆ 515 ಸೈಟ್ಸ್ ಅನ್ನು ರಾಜಮಹಲ್ ಸೆಕೆಂಡ್ ಸ್ಟೇಜ್‌ನಲ್ಲಿ ರಿಲೀಸ್ ಮಾಡಿದ್ದೇನೆ. ಇವತ್ತು ಏನು ಪರಿಸ್ಥಿತಿ ಆಗಿದೆಯೆಂದರೆ ಮೂರು ವರ್ಷವಾದರೂ ಇನ್ನೂ ಪೊಜಿಷನ್ ಸಿಗುತ್ತಾ ಇಲ್ಲ.

ಕೋರ್ಟಿನಲ್ಲಿ ಸ್ಟೇ ಇದೆಯೆಂದು ಹೇಳುತ್ತಿದ್ದಾರೆ.ನಿಮಗೆ ಇಂಟರೆಸ್ಟ್ ಇದ್ದರೆ ಕಮಿಟ್‌ಮೆಂಟ್ ಇದ್ದರೆ ಅದು ವೆಕೇಟ್ ಆಗಲಿಕ್ಕೆ ಸಾಧ್ಯವಿದೆ. ಆದರೆ ನೀವುhand is glove ಇದ್ದೀರಿ. ಆದ್ದರಿಂದ ಈ ರೀತಿಯಾಗಿದೆ. ಇನ್ನು ಬಲ್ಕ್ ಅಲಾಟ್‌ಮೆಂಟ್ ಬಗ್ಗೆ ನಾನು ನಿಮಗೆ ಹೇಳಿದ್ದೇನೆ. ಎನ್.ಆರ್.ಐ ನವರಿಗೆ ಬಿಡಿಎ ಅವರು ರಿಜರ್‌ವೇಶನ್ ಅಷ್ಟೇ ಮಾಡಿದ್ದಾರೆ. ಸರ್ಕಾರದಿಂದ ಯಾವುದೇ ಆಜ್ಞೆಆಗಿಲ್ಲ, High Court Lordships have held that BDA has no powers to do bulk allotment. This point we have argued before the Kuldip Singh Commission on also that the BDA has no powers to do bulk allotment. ಆದರೆ ಅವರು ಏನು ಅಭಿಪ್ರಾಯಕ್ಕೆ ಬಂದು ಅಂದರೆ, No, BDA has bulk allotment powers in spite of bringing High Court rulings to his notice, he said BDA has got powers to make bulk allotment. ನೀವು ಇಲ್ಲಿ ಕುಳಿತುಕೊಂಡು ಏನು ಹೇಳಿದಿರಿ ಅಂದರೆ, ಬಲ್ಕ್ ಅಲಾಟ್‌ಮೆಂಟ್ ಮಾಡುವ ಅಧಿಕಾರ ಬಿಡಿಎ ಗೆ ಇದೆ, ಬಿಡಿಎ ಯವರು ಎನ್‌ಆರ್‌ಐಗೆ ಲ್ಯಾಂಡ್ ಕೊಟ್ಟಿದ್ದಾರೆಂದು ಹೇಳಿದಿರಿ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಲ್ಕ್ ಅಲಾಟ್‌ಮೆಂಟಿಗೆ ಏಕೆ ಅಮೆಂಡ್‌ಮೆಂಟ್ ತರುತ್ತಿದ್ದೇನೆಂದರೆ ಹೈಕೋರ್ಟಿನವರು ಬಿಡಿಎಗೆ ಬಲ್ಕ್ ಅಲಾಟ್‌ಮೆಂಟ್ ಮಾಡುವ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಹಾಗಾದರೆ ನಾನು ಅಲ್ಲಿ ಕುಳಿತಾಗ ಏನು ಉತ್ತರ ಕೊಟ್ಟಿದ್ದೇನೆ ಅದರಿಂದ ನೀವು ಕನ್‌ವಿನ್ಸ್ ಆಗಿಲ್ಲ. ಅವತ್ತು ನಾವೇನು ಉತ್ತರ ಕೊಟ್ಟಿದ್ದೇವೋ ಅದೇ ಉತ್ತರವನ್ನು ಇವತ್ತು ನೀವು ಕೊಡುತ್ತಿದ್ದೀರಿ.ಇವತ್ತು ಬಲ್ಕಅಲಾಟ್‌ಮೆಂಟನ್ನು ನೀವು ಕಂಪನೀಸ್‌ಗೆ ಕೊಡಬಹುದು, ಸೊಸೈಟೀಸ್‌ಗೆ ಕೊಡಬಹುದು, ಫರ್ಮ್ಸ್‌ಗೆ ಕೊಡಬಹುದು, ಬಿಲ್ಡರ್ಸ್‌ಗೆ ಕೊಡಬಹುದು, ಡೆವಲಪರ್ಸ್‌ಗೆ ಕೊಡಬಹುದು. ಯಾವ ಬಿ.ಡಿಎಯಿಂದ ಬಡವರಿಗೆ 20 x 30, 30 x 40, ಒಂದು ಸೈಟನ್ನು ಕೊಡುವುದಕ್ಕಾಗಿಲ್ಲ, ಇವರು ಬಲ್ಕ್ ಅಲಾಟ್‌ಮೆಂಟ್ ಬಗ್ಗೆ ಏತಕ್ಕೆ ವಿಚಾರ ಮಾಡಬೇಕು? Forget bulk allotment for 5 years. ಮೊದಲು ನೀವು ಬಡವರಿಗೆ ಸೈಟನ್ನು ಕೊಡಿ. Then think about bulk allotment. ಏಕೆ 30, 40 50 ಎಕರೆ ಭೂಮಿಯನ್ನು ಕೊಡುತ್ತೀರಿ? ಇವತ್ತು ಬೆಂಗಳೂರಿನಲ್ಲಿ ರಿಕನ್ವೆ ಬಹಳ ದೊಡ್ಡ ಜ್ವಲಂತ ಸಮಸ್ಯೆಯಾಗಿದೆ. ಹಿಂದೆ ಬಿಡಿಎ ಯಿಂದ ರೀಕನ್ವೆ ಆಗಿದೆ. ಅದಾದನಂತರ Courts held BDA has no powers to do re-conveyance. BDA has no powers. ಬೆಂಗಳೂರಿನಲ್ಲಿ ಕೆಲವು ಕಡೆ ರೀಕನ್ವೆ ಆಗಿದೆ, ಕೆಲವು ಕಡೆ ರೀಕನ್ವೆ ಆಗಿಲ್ಲ, ತಮ್ಮ ಗಮನಕ್ಕೆ ಈ ಸಮಸ್ಯೆಗಳು ಬಂದಿರಬಹುದು.

ಇವತ್ತು ಅಲ್ಲಿ ಡೆವೆಲಪ್‌ಮೆಂಟ್ ಆಗುತ್ತಿಲ್ಲ, ಇದು ಬಡವರ ಸಮಸ್ಯೆಯಾಗಿದೆ. ಪೂರ್ ಪೀಪಲ್, ಮಿಡಲ್ ಕ್ಲಾಸ್ ಪೀಪಲ್ ಸಮಸ್ಯೆಯಾಗಿದೆ.

30 x 40, 40 x 60 ಸೈಟ್‌ಗಳಲ್ಲಿ ಏನು ಮನೆ ಕಟ್ಟಿಕೊಂಡಿದ್ದಾರೆ, ಅಲ್ಲಿ ಇವತ್ತು ಏನೂ ಡೆವಲಪ್‌ಮೆಂಟ್ ಆಗಿಲ್ಲ, ಈ ಸಮಸ್ಯೆಯನ್ನು ಬಗೆಹರಿಸಿದರೆ, the Bangalore Development Authority will get crores of rupees. ಈ reconveyance ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಯಾರೂ ಪ್ರಯತ್ನ ಮಾಡುತ್ತಿಲ್ಲ. ಯಾವ ಕಾರ್ಯಕ್ರಮವನ್ನೂ ಸರ್ಕಾರ ಹಾಕಿಕೊಂಡಿಲ್ಲ. ಮೊನ್ನೆ ಯಡಿಯೂರಪ್ಪನವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಸರ್ಕಾರದಿಂದ ಆದೇಶ ಕೊಡಲಾಗಿದೆ. ಯಾವ ಪ್ರಕಾರ 60-70 ಎಕರೆ ಭೂಮಿಯನ್ನು ರೀಕನ್ವೆ ಮಾಡಲಿಕ್ಕೆ ಬರುತ್ತದೆ. under what provisions you have given that order? ಮೊನ್ನೆ ಯಡಿಯೂರಪ್ಪನವರು ಏನು ಪ್ರಸ್ತಾಪ ಮಾಡಿದರು, ಆ ವಿಷಯದಲ್ಲಿ ಸರ್ಕಾರದಿಂದ ಆಜ್ಞೆ ಹೋಗಿದೆ. The BDA has no powers to do reconveryance. The High Court has held already on this point you have to bring an amendment for that .ಆದುದರಿಂದ ಬಡ ಜನತೆಯನ್ನು ರೀಕನ್ವೆಯನ್ಸ್ ಸಮಸ್ಯೆಯನ್ನು ಪ್ರಾಧಾನ್ಯತೆ ಮೇಲೆ ಬಗೆಹರಿಸಲು ಪ್ರಯತ್ನ ಮಾಡಿ. ಅದೇ ಪ್ರಕಾರ, 1990-91ರ ಬಜೆಟ್‌ನಲ್ಲಿ Urban vacant Land Tax ಇಂಟ್ರೊಡ್ಯೂಸ್ ಮಾಡುತ್ತೇವೆ, ಇದರಿಂದ 21 ಕೋಟಿ ರೂಪಾಯಿಗಳ ಆದಾಯ ಬರಬಹುದು ಎಂದು ಹೇಳಿದ್ದಿರಿ. ಇದರ ಬಗ್ಗೆ ಏನು ಮಾಡಿದಿರಿ? ಎಲ್ಲಿದೆ ಆ ಬಿಲ್? ಆ ಬಿಲ್ ನಾನಿದ್ದಾಗ ಬಂದಿದ್ದು ಇದು ಪ್ರಾಕ್ಟಿಕಲ್ ಬಿಲ್ ಅಲ್ಲ, ಇದರಿಂದ ಕರಪ್ಷನ್ ಹೆಚ್ಚಾಗುತ್ತದೆ. ಹೆರಾಸ್‌ಮೆಂಟ್ ಹೆಚ್ಚಾಗುತ್ತದೆ, 21ಕೋಟಿ ರೂಪಾಯಿಗಳಲ್ಲಿ, 21ಲಕ್ಷ ರೂಪಾಯಿಗಳೂ ಬರುವುದಿಲ್ಲವೆಂದು ನಾನು ಹೇಳಿದ್ದೇನೆ. ಇವತ್ತೂ ಹೇಳುತ್ತೇನೆ. ಆ ಒಂದು ಲೆಜಿಸ್ಲೇಷನ್ ಏನಿದೆ ಆದರಿಂದ ನೀವು ಯಾವ ಗೋಲನ್ನು ರೀಚ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರೋ ಅದು ಸಾಧ್ಯವಿಲ್ಲವೆಂದು ನಾನು ಹೇಳುತ್ತೇನೆ. ಆದ್ದರಿಂದ ಇದನ್ನು ತಾವು ಕೈಬಿಟ್ಟರೆ ಪಟ್ಟಣ ಪ್ರದೇಶದಲ್ಲಿ ಜನ ಸಾಮಾನ್ಯರು ಸುಖವಾಗಿ ಉಳಿಯಬಹುದು. ಆದರೆ ಹರಾಸ್‌ಮೆಂಟ್‌ನಿಂದ ದುರುಪಯೋಗ ಮಾತ್ತು ಕರಪ್ಷನ್ ಹೆಚ್ಚಾಗುತ್ತದೇ ವಿನಃ ಬೇರೇನೂ ಆಗುವುದಿಲ್ಲ. ಅದೇ ಪ್ರಕಾರ ನಮ್ಮ ಕರ್ನಾಟಕ ಮುನಿಸಿಪಾಲಿಟಿ ಆಕ್ಟ್ ಮತ್ತು ಕಾರ್ಪೊರೇಷನ್ ಆಕ್ಟ್ ಇದೆ ಇದರ ಬಗ್ಗೆ ನಾವು ಅಧಿಕಾರದಲ್ಲಿದ್ದಾಗ ಅಂದರೆ ನಾನು ಮಂತ್ರಿಯಾಗಿದ್ದಾಗ, ಇದಕ್ಕೆ ಕೆಲವು ಡ್ರ್ಯಾಸ್ಟಿಕ್ ಅಮೆಂಡ್‌ಮೆಂಟನ್ನು ತರಬೇಕೆಂದು ನಾವು ವಿಚಾರ ಮಾಡಿದ್ದೆವು. ಇವತ್ತು ಏನಾಗಿದೆಯೆಂದರೆ ಕಾರ್ಪೊರೇಷನ್ ಮೇಯರ್ ಗೂ ಅಧಿಕಾರವಿಲ್ಲ, ಮುನಿಸಿಪ್ಯಾಲಿಟಿ ಪ್ರೆಸಿಡೆಂಟಿಗೂ ಅಧಿಕಾರ ಇಲ್ಲ. ಏನು ಡೆಪ್ಯೂಟಿ ಕಮೀಷನರ್ ಹೇಳುತ್ತಾರೆ, ಏನು ಡಿವಿಜನಲ್ ಕಮೀಷನರ್ ಹೇಳುತ್ತಾರೆ, ಏನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡೈರೆಕ್ಟರ್ ಏನು ಹೇಳುತ್ತಾರೆ ಅದನ್ನು ಅವರು ಕೇಳಬೇಕಾಗಿದೆ. what powers the Elected Body has ಚುನಾಯಿತ ಪ್ರತಿನಿಧಿಗಳಿಗೆ ಏನೇನೂ ಅಧಿಕಾರವಿಲ್ಲ, ತಾವು ಬಾಂಬೆ ಮುನಿಸಿಪ್ಯಾಲಿಟಿ ಆಕ್ಟನ್ನು ತಂದು ನೋಡಿ. ಅದರಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದಾರೆ. ಡೆವಲಪ್‌ಮೆಂಟ್ ವರ್ಕ್ ಮಾಡುವ ಬಗ್ಗೆಯಾಗಲೀ, ನಿವೇಶನ ಕೊಡುವುದಲ್ಲಿಯಾಗಲಿ, ಡಿಸಿಪ್ಲಿನ್ ಆಕ್ಷನ್ ತೆಗೆದುಕೊಳ್ಳುವ ಬಗ್ಗೆಯಾಗಲೀ ಕೆಲವು ಡಿಸ್ ಕ್ರಿಶನರಿ ಪವರ್ಸ್ ಕೊಟ್ಟಿದ್ದಾರೆ. ಆದರೆ ಇಲ್ಲ ಏನೇನೂ ಅಧಿಕಾರ ಇಲ್ಲ. ನಾವು ಶಾಸಕರಾಗಿ ಚುನಾಯಿತರಾಗಿ ಬಂದ ಮೇಲೆ, ನಮಗೆ ಪ್ರಿವಿಲೇಜಸ್ ಮತ್ತು ಅಧಿಕಾರ ಇರಬೇಕು. ಇವೆರಡೂ ಇಲ್ಲವಾದಾಗ ನಾವು ಏನು ಮಾಡುವುದಕ್ಕೆ ಆಗುತ್ತದೆ? ಹಾಗಾದರೆ ತಾವು ಈ ಕರ್ನಾಟಕ ಮುನಿಸಿಪ್ಯಾಲಿಟಿ ಆಕ್ಟ್ ಮತ್ತು ಕಾರ್ಪೊರೇಶನ್ ಆಕ್ಟ್‌ಗೆ ಆದಷ್ಟು ಬೇಗ ಅಮೆಂಡ್ ಮೆಂಟ್ ನ್ನು ತಂದು ಹೆಚ್ಚಿನ ಶಕ್ತಿ, ಅಧಿಕಾರವನ್ನು ನೀವು ಚುನಾಯಿತ ಪ್ರತಿನಿಧಿಗಳಿಗೆ ಕೊಡುವುದಕ್ಕೆ ಪ್ರಯತ್ನ

ಮಾಡಬೇಕು ಹಾಗೂ ಇದರಿಂದ ತಮಗೆ ಕೀರ್ತಿ ಬರಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನ ಅಲಂಕರಿಸಿದರು)

ಇನ್ನು ನಮ್ಮ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಬಗ್ಗೆ ಹೇಳುವುದಾದರೆ, ಕಳೆದ ವರ್ಷದ ಅನ್ಯುಯಲ್ ರಿಪೋರ್ಟ್‌ನಲ್ಲಿ ಅರ್ಬನ್ ಸೀಲಿಂಗ್ ಕೇಸಸ್ ಎಷ್ಟು ಡಿಸ್ ಪೋಸ್ ಮಾಡಿದರು ಎಂಬ ಬಗ್ಗೆ ಡೀಟೈಲ್ಸ್ ಇತ್ತು. ಈ ವರ್ಷ ಅದು ಕಾಣುತ್ತಿಲ್ಲ. ತಾವು ಏನು ಹೇಳಿದ್ದೀರಿ ಎಂದರೆ, total declaration under the Urban Land Ceiling Act - ಮಾರ್ಚ್ 1991ರವರೆಗೆ, 33572 ಅರ್ಜಿಗಳು ಬಂದಿದ್ದು, 21948 ಅರ್ಜಿಗಳನ್ನು ಡಿಸ್ ಪೋಸ್ ಮಾಡಿದ್ದೀರಿ. ಇನ್ನೂ 12000 ಅರ್ಜಿಗಳ ಬಗ್ಗೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಏನು ತೊಂದರೆಯಾಗಿದೆ? ತಾವು ಕ್ರಮ ತೆಗೆದುಕೊಂಡರೆ ಸರ್ಕಾರದ ವಶಕ್ಕೆ ಸಾಕಷ್ಟು ಭೂಮಿ ಬರಬಹುದು. ಇದರಲ್ಲಿ ಅಧಿಕಾರಿಗಳಿಗೆ ಏನು ಪ್ರಾಬ್ಲಮ್ ಇದೆ? ಅದೇ ಪ್ರಕಾರ ,total excess land acquired under section 10(3) of the said Act is 1637 ಹೆಕ್ಟೇರ್. ಆದರೆ ಪೊಸೆಷನ್ ತೆಗೆದುಕೊಂಡಿದ್ದು ಕೇವಲ 853 ಹೆಕ್ಟೇರ್ ಭೂಮಿಯನ್ನು ಮಾತ್ರ. ಬಾಕಿ ಉಳಿದ 893ಎಕರೆ ಪೊಜಿಶನ್ ಏತಕ್ಕೆ ತೆಗೆದುಕೊಳ್ಳುತ್ತಿಲ್ಲ? ಅದು ಕೋರ್ಟಿನಲ್ಲಿದೆಯೇಯ ಅದಕ್ಕೆ ಸ್ಟೇ ಇದೆಯೇ? ಪೊಜಿಶನ್ ತೆಗೆದುಕೊಳ್ಳುವುದಕ್ಕೆ ಏನು ಪ್ರಾಬ್ಲಮ್ ಆಗಿದೆ? ಏಕೆಂದರೆ, ಈ ಆಕ್ಟ್‌ನಲ್ಲಿ ಹೆಚ್ಚಿನ ಆಸಕ್ತಿ ನಾನೇನು ತೆಗೆದುಕೊಳ್ಳುತ್ತೇವೆಂದರೆ, ಆದಷ್ಟು ಬೇಗ ಈ ಫೈಲನ್ನು ಡಿಸ್‌ಪೋಸ್ ಮಾಡಬೇಕಾಗುತ್ತದೆ. ಇದರ ಬಗ್ಗೆ ಆಸಕ್ತಿ ಇರಬೇಕಾಗುತ್ತದೆ. ಅರ್ಬನ್ ಲ್ಯಾಂಡ್ಸ್ ಸೀಲಿಂಗ್ಸ್ ಆಕ್ಟ್ ತಂದ ಮೂಲ ಉದ್ದೇಶ ಏನೆಂದರೆ, ಒಂದೇ ಒಂದು ವ್ಯಕ್ತಿ ಕೈಯಲ್ಲಿ ಹೆಚ್ಚಿನ ಜಮೀನು ಇರಬಾರದು, ಆದರಿಂದ ಪ್ರಾಫಿಟರಿಂಗ್ ಆಗುತ್ತದೆ, ಸ್ಪೆಕ್ಯುಲೇಶನ್ ಆಗುತ್ತದೆ ಎಂಬ ಮುಖ್ಯ ಉದ್ದೇಶದಿಂದ ನಾನು ತಂದಿದ್ದು. ಆದರೆ ನಾವು ಇದರ ವಿರುದ್ಧ ಮಾಡುತ್ತಿದ್ದೇವೆ. ಇವೊತ್ತು ಅದನ್ನು ಪುನಃ ಪ್ರಸ್ತಾಪ ಮಾಡಬೇಕಾಗುತ್ತದೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ರಿಪ್ಲೈ ಕೊಡುವಾಗ ಅಷ್ಟು ಕನ್‌ವಿನ್ಸಿಂಗ್ ರಿಪ್ಲೈ ನನಗೆ ಕೊಟ್ಟಿಲ್ಲ, ಅದು ರಾಮಯ್ಯನವರಿಗೆ ತಾವು 73 ಎಕರೆ ಭೂಮಿ ಕೊಟ್ಟಿರುವ ವಿಚಾರ.

ಅದರಲ್ಲಿ ಒಂದೇ ಆರ್ಡರ್‌ನಲ್ಲಿ ಎರಡು ವಿಚಾರ ಇದೆ. ಸೆಕ್ಷನ್ 20(1)(ಎ) ಪ್ರಕಾರ, ಗೋಕುಲ ಎಜುಕೇಷನ್ ಫೌಂಡೇಶನ್‌ಗೆ ಕೆಲವು ಭೂಮಿಯನ್ನು ಕೊಟ್ಟಿರಿ ಬಾಕಿ, ಉಳಿದ 14 ಎಕರೆ ಭೂಮಿಯನ್ನು ರಾಮಯ್ಯನವರಿಗೆ ಗ್ರೂಪ್ ಹೌಸಿಂಗ್‌ಗೆ ಕೊಟ್ಟಿದ್ದೀರಿ ಮಾನ್ಯ ಮುಖ್ಯಮಂತ್ರಿಯವರು ನೀವು ಡಿನೋಟಿಫಿಕೇಷನ್ ಮಾಡಲಿಕ್ಕೆ ಹೇಳಿದ್ದೀರಿ ಎಂದು ಹೇಳಿದರು. ನಿಜವಾಗಿ ಹೇಳಬೇಕಾದರೆ,that it was wrong on the part of BDA to acquire these lands.. ಸಬ್‌ಸಿಕ್ವೆಂಟ್‌ಲಿ, ಕೋರ್ಟ್‌ನಲ್ಲಿ ಕ್ವಾಶ್ ಆಯಿತು ಕ್ವಾಶ್ ಆದ ನಂತರ ಡಿನೋಟಿಫೈ ಮಾಡುವುದು ಬೇರೆ ಪ್ರಶ್ನೆ. ಆದರೆ, ಲ್ಯಾಂಡ್ ಅಕ್ವಿಜಿಶನ್ ಆಕ್ಟ್ ಪ್ರಕಾರ ನೀವು ಅಕ್ವೈರ್ ಮಾಡುವುದಕ್ಕೆ ಹೋದರೆ, you have to shell out cross of rupees.. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಈ ಭೂಮಿಯನ್ನು ನೀವು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದಿರಿ, First instalment you have to pay only Rs. 25,000/- ಇದನ್ನು ನಾನು ಓದುತ್ತೇನೆ.

Payment of amount for vacant land acquired:

(1) Where any vacant land is deemed to have been acquired by any State Government under sub-section(3) of Section 10 such State Government shall pay to the person or persons having any interest therein.

(a) in a case where there is any income from such vacant land, an amount equal to eight and one-third times the net average annual income actually derived from such land during the period of five consecutive years immediately preceding the date of publication of the notification issued under sub-asection(1) of Section 10: or

(b) in case where no income is derived from such vacant land, an amount calculated at a rate not exceeding..

(i) tens rupees per square metre in the case of cant land situated in an urban agglomeration falling within category A or Category B specified in Schedule I...

How payment is made. It says.

"The State Government shall, within a period of six months from the date of the order of competent authority determining the amount to be paid under section II as the case may..

Twenty five percent, of the amount or twenty five thousand rupees, whichever is less, shall be paid in cash and the balance in negotiable bonds redeemable after the expiry of 25 years..

So, the decision of my Government even to recommend for de-notification to take over these lands under the Land Acquisition- We should have to pay crores under the market value.

ಆದರೆ ಅರ್ಬನ್ ಲ್ಯಾಂಡ್ ಸೀಲಿಂಗ್ ಪ್ರಾವಿಷನ್ ನೀವು ರಿವೋಕ್ ಮಾಡದಿದ್ದರೆ, you should have brought these lands for 3-4 lakhs.. ನಿಮ್ಮ ಹತ್ತಿರ ಹಣ ಇಲ್ಲವೆಂದು ನನಗೆ ಗೊತ್ತು. ಕೊಡುವುದು ಕೇವಲ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ. ಇದು ಫಸ್ಟ್ ಇನ್‌ಸ್ಟಾಲ್‌ಮೆಂಟ್ ಮಾತ್ರ. ಆದರೆ, ನೀವು ಏನು ಮಾಡಿದಿರಿ, ನೀವು ಈ ಭೂಮಿ you have given under Section 20 (1)(A). What Section 20(1) (a) says.

20. Power to exempt.-(1) Notwithstading anything contained in any of the foregoing provisions of this Chapter-

(a) Where any person holds vacant land in excess of the ceiling limit and the State Government is satisfied, either on its own motion or otherwise, that, having regard to the location of such land, the purpose to be used and such other relevant facts as the circumstances of the case may require, it is necessary or expedient in the public, interest so to do, that Government may, by order, exempt subject to such conditions...

So, what is public interest. What Public Interest you have achieved by transferring 61 acres of lands to Gokul Education Society. What is public interest there? They are all money making people.

ಅವರಿಗೆ ಮೆಡಿಕಲ್ ಕಾಲೇಜುಗಳಿವೆ, ಇಂಜಿನಿಯರ್ ಕಾಲೇಜಿದೆ. 10 ಲಕ್ಷ ಕ್ಯಾಪಿಟೇಷನ್ ಅಬಾಲಿಷನ್ ಆದರೂ ವಸೂಲಿ ಮಾಡುತ್ತಾರೆ. What is public interest you have achieved by giving this land.

ನಾನು ಮತ್ತೊಂದು ಅಂಶವನ್ನು ಹೇಳುತ್ತೇನೆ.

ಈ ಲ್ಯಾಂಡ್ ವಿಚಾರದಲ್ಲಿ ತಮ್ಮ ಆಜ್ಞೆ ಏನು ಇದೆ ಇದನ್ನು ತಾವೇ ಒಪ್ಪಿಕೊಳ್ಳುತ್ತೀರಿ. You have admitted in your own order. That I will read:

"The Town Planning Member. BDA, in his letter dated 6/7/89 has reported that Sy. Nos. 30 to 38 of Poornapura and 68, 69 and 70 of Mathikere village have not been nitified by them and the above lands have been reserved for various purposes like residential, commercial, public and semi-public, transport communication, industrial and park zone as per CDP...

So, the entire land reserved for park zone, public utility, commercial purposes residential purposes ಗೆ ಇದ್ದುದನ್ನು now could you transfer these lands ಇದಕ್ಕೆ ನಿಮ್ಮ ಟೌನ್ ಪ್ಲಾನಿಂಗ್ ಆಕ್ಟ್ ಅಡ್ಡಿ ಬರುವುದಿಲ್ಲವೆ? ಇದಕ್ಕೆ ಭೂಮಿಯ ಬದಲಾವಣೆಯು ಅವಶ್ಯಕತೆ ಇಲ್ಲವೇ ಹಾಗಾದರೆ ಏಕೆ ಪಾರ್ಕ್‌ಗೆ, ಪ್ಲೆಗ್ರೌಂಡ್‌ಗೆ ಈಭೂಮಿಯನ್ನು ಕೊಡುತ್ತೇವೆ ಎಂದು ಹೇಳುವ ಅವಶ್ಯಕತೆ ಏನು ಇತ್ತು. ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ? ಏನೂ ಇಲ್ಲ. Except your intention to give land. ನೀವು ಏನು ಮಾಡಿದಿರಿ ಎಂದರೆ you have changed the ownership from one hand to another hand. ಇದರಲ್ಲಿ ಅವರದೇನು ತೊಂದರೆ ಇಲ್ಲ.

ಹಿಂದೆ ರಾಮಯ್ಯನವರು ಓನರ್ ಆಗಿದ್ದರು, ಆಮೇಲೆ ಅವರ ಫ್ಯಾಮಿಲಿ ಸದಸ್ಯರು ಓನರ್ ಆದರು. ಅವರು ಇವತ್ತು ಗೋಕುಲ್ ಟ್ರಸ್ಟ್‌ಗೆ ಮೆಂಬರ್ ಆಗಿದ್ದಾರೆ. ಇದರಿಂದ ಸಾರ್ವಜನಿಕ ಹಿತಾಸಕ್ತಿ ಇಲ್ಲ. ಮತ್ತೆ ಈ 14 ಎಕರೆ ಭೂಮಿಯನ್ನು ಹೌಸಿಂಗ್‌ಗಾಗಿ ಕೊಟ್ಟಿದ್ದೀರಿ. ಇದು ಭಾರತ ಸರ್ಕಾರದ ಸುತ್ತೋಲೆ.ಇದನ್ನು Secretary to Government, Andrapradesh ಅವರಿಗೆ ಬರೆದದ್ದು. copy to All States ಕಳಿಸಿದ್ದಾರೆ. Is there any provision under Section 21 where in you can give land for housing purposes? ಈ 14 ಎಕರೆ ಭೂಮಿಯನ್ನು ಹೌಸಿಂಗ್ ಪರ್ಪಸ್‌ಗೆ ರಾಮಯ್ಯನವರಿಗೆ ಕೊಡುವುದಕ್ಕಿಂತ ಹೌಸಿಂಗ್ ಬೋರ್ಡ್‌ಗೆ ಏಕೆ ಕೊಡಲಿಲ್ಲ. ಬಿ.ಡಿ.ಎ.ಗೆ ಏಕೆ ಕೊಡಲಿಲ್ಲ. What was the necessity for giving it to Mr. Ramaiah? ಸರ್ಕಾರದ ಮುಂದೆ ಏನು ಪ್ರಪೋಸಲ್ ಇತ್ತು, ಏನು ಪ್ರಪೋಸಲ್ ಕೊಟ್ಟಿದ್ದರು. ಪ್ಲಾನ್ ಕೊಟ್ಟಿದ್ದರೊ, ಮತ್ತು ಪ್ರಪೋಸಲ್ ಕೊಟ್ಟಿದ್ದರೋ ಅವರು ಯಾವ ವೀಕರ್ ಸೆಕ್ಷನ್ ಅವರು ಯಾವ ಜನ? ಅವರಿಗೆ ಯಾರು ಭೂಮಿಯನ್ನು ಕೊಡುವವರಿದ್ದರು. ಈವತ್ತು ಸೆಕ್ಷನ್ 20ರಲ್ಲಿ ಹೇಳುತ್ತಾರೆ. ಇದನ್ನು ಆಜ್ಞೆ ಮಾಡುವಾಗ ಈ ರೀತಿ ಇದೆ.

'provided that no order under this clause shall be made unless the reasons for doing so are recorded in writing..

ಈ ಆಜ್ಞೆಯಲ್ಲಿ ಏನೂ ಸಾರ್ವಜನಿಕರ ಹಿತಾಸಕ್ತಿ ಇಲ್ಲ, ಇದರಿಂದ ಏನು public interest ಸರ್ವ ಆಗುತ್ತದೆ? ಆ ರೀತಿ ಏನಾದರೂ ನಿಮ್ಮ ಫೈಲ್‌ನಲ್ಲಿ ಇದ್ದರೆ ತೋರಿಸಿ. What was the public interest which Government thought will be served by giving these lands..

ಅದು ನಿಮ್ಮ ಆಜ್ಞೆಯಲ್ಲಿ ಇಲ್ಲ. ಈವತ್ತು ಯಾವ ಭೂಮಿಯನ್ನು ನೀವು ಅವರಿಗೆ ಕೊಟ್ಟಿರಿ. ಅದೇ ಭೂಮಿಯನ್ನು ಬಿ.ಡಿ.ಎ.ಗೆ ಅಥವಾ ಹೌಸಿಂಗ್ ಬೋರ್ಡ್‌ಗೆ ಕೊಡಬಹುದಾಗಿತ್ತು. ನಿಮ್ಮ ಆಜ್ಞೆಯನ್ನು ನೋಡಿ, ಅದು ಏನು ಹೇಳುತ್ತದೆಂದರೆ:

'The Gokul Education Foundation should utilise the entire vacant land within a period of three years from the date of this order for construction

of various educational buildings...

ii) the entire extent of 61 acres 26 $\frac{1}{2}$ guntas of land should be transferred in favour of Gokul Education Foundation within a period of six months;

iii) the land in question should not be transferred by way of sale, gift, mortage or otherwise without prior permission of the Government by the Gokul Education Foundation after taking possession of the lands...

Why you have included this? Now, Gokul Education will againcome to you. That means the intention is to help them. ಏಕೆ ಪಬ್ಲಿಕ್ ಇಂಟರೆಸ್ಟ್ ಸರ್ವ್ ಆಗಿಲ್ಲವೆಂದು ಆಗ ಅವರು ಬರುತ್ತಾರೆಯೇ? Againg in the intentionis to help Gokul education Foundation ಮತ್ತೆ 3-4 ಜನ ನಮಗೂ ಮಾರಾಟ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಬರುತ್ತಾರೆ ಇದರಲ್ಲಿ ಯಾವುದು ಪಬ್ಲಿಕ್ ಇಂಟರೆಸ್ಟ್ ಪಾರ್ಕ್ಸ್ ಇವೆ. ಕಮರ್ಷಿಯಲ್ ರೆಸಿಡೆನ್‌ಷಿಯಲ್ ಏರಿಯಾಸ್ ಇದೆ ಅದನ್ನು ನೀವು ಗಮನಕ್ಕೆ ತೆಗೆದುಕೊಂಡಿಲ್ಲ. ಇವತ್ತು ನಾನು ಹೇಳಿದ ಹಾಗೆ ಈ ಲ್ಯಾಂಡ್ ತಾವು urban land ceiling ನಲ್ಲಿ ತೆಗೆದು ಕೊಂಡರೆ throw away price ಸರ್ಕಾರದ ಅದೀನಕ್ಕೆ ಬರುತ್ತಿತ್ತು. ಅದಕ್ಕೆ ತಾವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆಮೇಲೆ ಇವರು ಯಾರು ಮನೆಗಳನ್ನು ಕಟ್ಟುವುದು ಎಂದರೆ Weaker ಸೆಕ್ಷನ್ ಇಂಡಸ್ಟ್ರಿಯಲ್ ಲೇಬರ್‌ದ್ದು ಎಷ್ಟು ರೂಪಾಯಿಗಳಿಗೆ ಮಾರಾಟ ಮಾಡಬೇಕು ಎಂದು ತಾವು ಏನಾದರೂ ಕಂಡೀಷನ್ ಹಾಕಿದಿರಾ? ಅಟ್‌ಲೀಸ್ಟ್ ಆರ್ಡರ್‌ನಲ್ಲಿ ಅದನ್ನು ಬರೆಯಗೇಕಾಗಿತ್ತು. ಬಿ.ಡಿ.ಎ. ನವರು ಯಾವ ರೇಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ ಆ ರೇಟಿನಲ್ಲಿ ಮಾರಾಟ ಮಾಡುವುದಕ್ಕೆ ಬರೆಯಬೇಕಾಗಿತ್ತು ಇನ್‌ಕಂ ಕ್ರೈಟೀರಿಯಾ ಏನು? ಯಾರು ಇಂಡಸ್ಟ್ರಿಯಲ್ ವರ್ಕರ್ ಯಾರು ವೀಕರ್ ಸೆಕ್ಷನ್ ಎಂದು is there any thing in the order. ಈ ಆರ್ಡರಿನಲ್ಲಿ ವೀಕರ್ ಸೆಕ್ಷನ್ ಡಿಪಿನಿಷನ್ ಇಲ್ಲ. ಯಾವ ಇಂಡಸ್ಟ್ರಿಯಲ್ ವರ್ಕರ್ ಇಲ್ಲ. 14 ಎಕರೆಯಲ್ಲಿ ಇಷ್ಟು ಮನೆಗಳನ್ನು ಕಟ್ಟುತ್ತೇವೆಂದು ಅವರು ನಿಮಗೆ ಲಿಸ್ಟ್ ಕೊಟ್ಟಿದ್ದಾರೆಯೇ? Atleast you should have insisted for the list ಯಾರು ಯಾರು ಕೊಡುತ್ತಾರೆಂದು ಹೇಳಿ ಅವರ ಆದಾಯ ನಾವು ತೆಗೆದುನೋಡುತ್ತೇವೆಂದು ಲಿಸ್ಟನ್ನು ಕೂಡ ಇನ್‌ಸಿಸ್ಟ್ ಮಾಡಿಲ್ಲ.

ಯಾವ ರೇಟಿನಲ್ಲಿ ಮಾರಾಟ ಮಾಡಬೇಕು ಎನ್ನುವುದೂ ಇಲ್ಲ. ಯಾವ ರೀತಿಯಾದ ಮನೆಗಳನ್ನು ಕಟ್ಟಬೇಕು ಎನ್ನುವುದೂ ಇಲ್ಲ. He is free. He can make his sons grand sons as industrial workers. Has he got any industries? If he has no industries how can he construct the Honses for them. ಯಾವ ರೇಟ್‌ನಲ್ಲಿ ಮಾರಾಟ ಮಾಡಬೇಕು ಎನ್ನುವುದಕ್ಕೂ ಮಿತಿ ಇಲ್ಲ. ಹಾಗಾಗಿ ಇವತ್ತು ಈ ಆರ್ಡರ್ ಇದೆಯಲ್ಲ. this is totally against the spirit of the Urban land celling Act ಏಕೆಂದರೆ ಅರ್ಬನ್ ಲ್ಯಾಂಡ್ಸ್ ಆಕ್ಟ್ ಏನು ಇದೆ ಇದನ್ನು ಏಕೆ ಆಕ್ಟ್ ಮಾಡಿದರು ಎಂದರೆ ಒಂದೇ ವ್ಯಕ್ತಿ ಅಥವಾ ಒಂದೇ ಸಂಸ್ಥೆ ಇದ್ದಾಗ ಅದಕ್ಕೆ ಹೆಚ್ಚಿನ ಭೂಮಿ ಇರಬಾರದು ಇದ್ದರೆ ಪ್ರಾಫಿಟರಿಂಗ್ ಆಗುತ್ತದೆ ಸರ್‌ಕ್ಯುಲೇಷನ್ ಆಗುತ್ತದೆ.There must be equal distribution. This was theintention of the Act. but by this order you have defeated the provisions of this Section. ಇವತ್ತು ಪುನಃ ಅದೇ ಮನೆತನದಲ್ಲಿ ಅದೇ ವ್ಯಕ್ತಿ ಕೈಗೆ ಈ ಭೂಮಿ ಹೋಗಿದೆ. Therefore, this order is illegal. I recuest the Government to withdraw this. It is not in the public interest. Instead you give those lands to the Housing Board or to the BDA and then you take this land for construction and distribution among weaker sections. ನೀವು ರಾಮಯ್ಯನವರಿಗೆ ಭೂಮಿಗೆ ಕೊಟ್ಟಿರಿ ಅವರಿಗೆ ಅಲ್ಲಿ ಕಟ್ಟಲು ಅನುಕೂಲವಾಯಿತು ಆಂಧ್ರ ಪ್ರದೇಶದ ಸರ್ಕ್ಯುಲರ್ ಇದೆ. what the A.P Circular says? It says within two years he should construct the houses If he could not construct within two years ಮತ್ತೊಂದು ವರ್ಷ ಎಕ್ಸ್‌ಟೆನ್‌ಷನ್ ಕೊಡಬಹುಧು ಆದರೆ ನೀವು ಏನು ಮಾಡಿದಿರಿ ಎಂದರೆ ಪುನಃ ಎಕ್ಸ್‌ಟೆನ್‌ಷನ್‌ಗೆ ಬರುವುದು ಬೇಡವೆಂದು ಒಂದೇ ಸಾರಿ ಮೂರು ವರ್ಷ ಕೊಟ್ಟು ಬಿಟ್ಟಿರಿ. But the Government of India's letter to the Andhra Pradesh says if any land is granted for the construction of Group Housing the Scheme should be completed within two years from one more year may be given. ಎಂದು ಇದೆ. ಆಮೇಲೆ ನೀವು ಏನು ಮಾಡಿದಿರಿ ಎಂದರೆ ರಾಮಯ್ಯನವರು ಪುನಃ ಬರುವುದು ಬೇಡ ಒಮ್ಮೆಲೇ ಮೂರು ವರ್ಷ ತೆಗೆದುಕೊಂಡು ಹೋಗಿ ಎಂದು ಮೂರು ವರ್ಷ ಕೊಟ್ಟಿರಿ. Not only this order is defective but also there is favourtism and nepotim involved here. Government stakes are involved here. ಆದ್ದರಿಂದ ತಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಈ ಆರ್ಡರನ್ನು ವಿತಡ್ರಾ ಮಾಡಿ ಮತ್ತು ಯಾವ ಸ್ಪಿರಿಟ್‌ನಲ್ಲಿ ಕಾಯಿದೆ ಮಾಡಿದ್ದಾರೆ ಅದನ್ನು ಗಮನದಲ್ಲಿ ಇಟ್ಟುಕೊಂಡು ಮುಂದೆ ಆರ್ಡರ್ ಮಾಡಿ ಎಂದು ಹೇಳಿ ಈ ಇಲಾಖೆಯ ಬೇಡಿಕೆಗೆ ಪುನಃ ನನ್ನ ವಿರೋಧ ಸೂಚಿಸಿ ನನ್ನ ಮಾತುಗಳನ್ನು ಮುಗುಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೆ ಈ ನಗರಾಭಿವೃದ್ಧಿ ಇಲಾಖೆಗಳ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳ ಬೇಕೆಂದು ನಾನು ತೀರ್ಮಾನಿಸಿದ್ದೇನೆ. ಮೊದಲನೆಯದಾಗಿ ಬೆಂಗಳೂರು ಮಹಾನಗರಪಾಲಿಕೆಯ ವಿಚಾರದಲ್ಲಿ ಕೆಲವು ನ್ಯೂನತೆಗಳ ಬಗ್ಗೆ ಈ ಸಭೆಯಲ್ಲಿ ತಮ್ಮ ಗಮನಕ್ಕೆ ತರಬೇಕೆಂದು ತೀರ್ಮಾನ ಮಾಡಿದ್ದೇನೆ. ಬೆಂಗಳೂರು ನಗರ ಒಂದು ರೀತಿಯ ಸುಂದರವಾದ ನಗರ, ಇದು ಕರ್ನಾಟಕದ ರಾಜ್ಯಧಾನಿ ಈ ರಾಜಧಾನಿಯನ್ನು ಯಾವರೀತಿ ಬೆಳೆಸಬೇಕು ಉಳಿಸಬೇಕು ಕಾಪಾಡಬೇಕು ಎನ್ನತಕ್ಕಂಥಾದ್ದು ಸರ್ಕಾರದ ಅತಿಮುಖ್ಯರಾದಂಥ

ಕರ್ತವ್ಯ ಈ ಬೆಂಗಳೂರು ನಗರವನ್ನು ಸಾಂಸ್ಕೃತಿಕವಾಗಿ ಮತ್ತು ಬಹಳ ಸುಂದರ ನಗರ ಇರತಕ್ಕದ್ದರಲ್ಲಿ ನಮ್ಮೆಲ್ಲರ ಒಂದು ಹೆಚ್ಚಿನ ಪ್ರತಿಷ್ಠೆ ಇದೆ ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರ ನಮ್ಮ ಕರ್ನಾಟಕದ ರಾಜಧಾನಿಯೋ ಅಥವಾ ಬೇರೆ ಯಾವುದೋ ಒಂದು ರಾಜ್ಯದ ರಾಜಧಾನಿಯೋ ಎನ್ನುವಷ್ಟು ಮಟ್ಟಿಗೆ ನಮ್ಮ ಕಣ್ಮುಂದೆ ಬರುತ್ತಿದೆ. ಈ ಪರಿಸ್ಥಿತಿಯನ್ನು ನಾವು ತೀವ್ರವಾಗಿ ಗಮನಿಸಬೇಕಾಗಿದೆ. ಒಂದುಕಡೆ ಬೇರೆ ರಾಜ್ಯಗಳಿಂದ ವಲಸೆ ಬರತಕ್ಕಂಥಾದ್ದು ಮತ್ತೊಂದು ಕಡೆ ಅದಕ್ಕೆ ಮೆರಗು ಕೊಡತಕ್ಕಂಥ ಅನೇಕ ಅನ್ಯಾಯಗಳು ಇಲ್ಲಿ ನಡೆಯುತ್ತಿದೆ. ಈಗಾಗಲೇ ನಾನು ಈ ಸಭೆಯಲ್ಲಿ ತಮ್ಮ ಗಮನಕ್ಕೆ ತಂದಿರುವ ರೀತಿಯಲ್ಲಿ ನಮ್ಮ ಬೆಂಗಳೂರು ನಗರದ ರಸ್ತೆಗಳಿಗೆ ನಾಮಕರಣ ಮಾಡುವುದಾಗಲಿ ಈ ಬೆಂಗಳೂರು ನಗರದಲ್ಲಿ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಾಗಲಿ ಇದಕ್ಕೆ ಏನಾದರೂ ಒಂದು ಸೂತ್ರ ಇರಬೇಕು. ಯಾವ ಒಂದು ಆಧಾರದ ಮೇಲೆ ಅಥವಾ ಯಾವ ಒಂದು ಸೂತ್ರದ ಅಡಿಯಲ್ಲಿ ಮಾಡುವುದಕ್ಕೆ ಸರ್ಕಾರಕ್ಕೆ ಒಂದು ನಿಗದಿತರಾದಂಥ ನಿರ್ಧಾರ ನಿಯಮಗಳು ಇರಬೇಕು. ತಮಗೆ ಗೊತ್ತಿರುವ ಹಾಗೆ ನಾನು ಯಾರ ಬಗ್ಗೆಯೂ ವೈಯಕ್ತವಾಗಿ ಇದನ್ನು ಮಾತನಾಡಿದೆ ಎನ್ನತಕ್ಕಂಥದ್ದು ಅಲ್ಲ. ಬೆಂಗಳೂರು ನಗರ ಕನ್ನಡಿಗರ ರಾಜಧಾನಿಯಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸತಕ್ಕಂಥ ಒಂದು ಸುಂದರ ನಗರವಾಗಿ ಇರಬೇಕು. ಎನ್ನತಕ್ಕಂಥಾದ್ದು ನಮ್ಮೆಲ್ಲರ ಆಕಾಂಕ್ಷೆ ಇದು ಕನ್ನಡಿಗರ ಒಂದು ಕೀರ್ತಿಯನ್ನು ಭವ್ಯ ಭವಿಷ್ಯತ್‌ನ್ನು ಬೆಳಗತಕ್ಕಂಥ ಒಂದು ನಗರವಾಗಿದೆ. ಈಗಾಗಲೇ ಈ ನಗರವನ್ನು ಸ್ಥಾಪನೆ ಮಾಡಿದಂಥ ಕೆಂಪೇಗೌಡರ ಗೋಪುರಗಳನ್ನು ನಾವು ಅನೇಕ ಕಡೆ ನೋಡಿದ್ದೇವೆ. ಇವು ಬೆಂಗಳೂರು ನಾಲ್ಕೂ ಕಡೆ ರಾರಾಜಿಸುತ್ತಿದೆ. ಆ ಗೋಪುರಗಳಿಗೂ ಕೂಡ ಕಳಂಕ ಬರತಕ್ಕಂಥ ಪರಿಸ್ಥಿತಿ ಅನೇಕ ಕಡೆ ಬಂದಿರುವುದು ಉಂಟು. ಅದನ್ನು ವಿರೋಧಿಸಿ ತಡೆಹಿಡಿದಿರತಕ್ಕಂಥಾದ್ದು ತಮಗೆ ಗೊತ್ತಿದೆ ಬೆಂಗಳೂರಿನಲ್ಲಿ ಸದಾಶಿವನಗರ ತಮಗೆ ಗೊತ್ತು ಅಲ್ಲಿ ರಮಣ ಮಹರ್ಷಿಯವರ ಪ್ರಾರ್ಥನಾಮಂದಿರ ಇದೆ. ನಾನು ರಮಣಮಹರ್ಷಿಯವರನ್ನು ವಿರೋಧ ಮಾಡುತ್ತಿಲ್ಲ. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ಆ ರಸ್ತೆಗೆ ರಮಣಮಹರ್ಷಿ ರಸ್ತೆ ಎಂದು ಇಟ್ಟರು. ರಮಣಮಹರ್ಷಿಯವರ ಪ್ರಾರ್ಥನಾಮಂದಿರವನ್ನು ಅಲ್ಲಿ ಕಟ್ಟಿದರು ಬಹುಶಃ ಈ ರಾಜ್ಯದ ಸಂಘಸಂಸ್ಥೆಗಳು, ಕನ್ನಡ ಸಂಘಸಂಸ್ಥೆಗಳು ಪ್ರತಿಭಟನೆ ಇದ್ದಿದರೆ ಅಲ್ಲಿರುವ ಕೆಂಪೇಗೌಡಗೋಪುರವನ್ನು ತೆಗೆದು ಆ ಗೋಪುರದ ಮುಂದಕ್ಕೂ ಕೂಡ ಇದರ ವ್ಯಾಪ್ತಿ ಹೋಗುತ್ತಿತ್ತು.

ಇವೊತ್ತು ಬೆಂಗಳೂರು ನಗರ ಮಹಾಪಾಲಿಕೆಯವರು ಒಂದು ತೀರ್ಮಾನಕ್ಕೆ ಬರಬೇಕು.ಈ ನಗರ ಯಾವ ಒಂದು ಸಂಸ್ಕೃತಿಯ ಹಿನ್ನೆಲೆಯಲ್ಲಿ ಯಾವ ಭಾಷೆಯ ಹಿನ್ನೆಲೆಯಲ್ಲಿ ಯಾವ ನಾಡಿನ ಹಿನ್ನೆಲೆಯಲ್ಲಿ ಬೆಳೆಯುತ್ತಿದೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಇದು ಯಾವುದೂ ಅರ್ಥಮಾಡಿಕೊಳ್ಳದೆ ಯಾರು ಬಂದು ಹೇಳುತ್ತಾರೆ ಅವರು ಹೇಳಿದ ತಕ್ಷಣ ಏನು ಬೇಕಾದರೂ ಕೊಡಬಹುದು ಎನ್ನುವುದು ಸರಿಯಲ್ಲ ಅದು ಸದಾಶಿವನಗರ ನಿಜವಾಗಲೂ ಕೂಡ ಕರ್ನಾಡ ಸದಾಶಿವರಾಯರು ಈ ನಾಡಿನ ಸ್ವಾತಂತ್ರಕ್ಕೋಸ್ಕರವಾಗಿ ಈ ದೇಶದ ಸ್ವಾತಂತ್ರಕ್ಕೋಸ್ಕರವಾಗಿ ತ್ಯಾಗ ಮಾಡಿದಂಥ ಒಬ್ಬ ಮಹಾನ್‌ವ್ಯಕ್ತಿ ಅವರ ಹೆಸರನ್ನೇ ಆ ರಸ್ತೆಗೆ ಇಟ್ಟಿದ್ದರೆ ನಾನು ಸಂತೋಷಪಡುತ್ತಾ ಇದ್ದೆ. ಈ ನಾಡನ್ನು ಕಟ್ಟಲು ಅತ್ಯುನ್ನತವಾದಂಥ ಶ್ರಮವಹಿಸಿದಂಥ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಮನೆ ಕೂಡ ಅದೇ ರಸ್ತೆಯಲ್ಲಿದೆ. ಕೆಂಗಲ್ ಹನುಮಂತಯ್ಯನವರು ಕರ್ನಾಟಕ ಏಕೀಕರಣಕ್ಕೋಸ್ಕರವಾಗಿ ತಮ್ಮ ಅಧಿಕಾರವನ್ನು ಕಳೆದುಕೊಂಡಂಥ ಒಬ್ಬ ಧೀಮಂತ ಶಕ್ತಿ ಮತ್ತು ವ್ಯಕ್ತಿ ಇವೊತ್ತು ಅವರ ಮನೆ

ಇರತಕ್ಕ ರಸ್ತೆಗೆ ಅವರ ಹೆಸರನ್ನು ಇಡಬಹುದಾಗಿತ್ತು ಬಳ್ಳಾರಿ ರಸ್ತೆಗೆ ಕೆಂಗಲ್ ಹನುಮಂತಯ್ಯ ರಸ್ತೆ ಎಂದು ಇಡಬಹುದಾಗಿತ್ತು. ಆದರೆ ಆ ರಸ್ತೆಗೆ ರಮಣಮಹರ್ಷಿಯವರ ರಸ್ತೆ ಎಂದು ಯಾರದೋ ಚಟ ಅಥವಾ ಯಾರದೋ ಒತ್ತಡಕ್ಕೆ ಮಣಿದು ಇಡತಕ್ಕಂಥಾದದು ಅಲ್ಲ.ರಸ್ತೆಗಳಿಗೆ ಹೆಸರನ್ನು ಇಡುವಾಗ ಮತ್ತು ಪ್ರತಿಮಗಳನ್ನು ಸ್ಥಾಪನೆ ಮಾಡುವಾಗ ನಗರಸಭೆಯವರು ರಾಜಕಾರಣಿಗಳು ಸರ್ಕಾರದವರು ಎಲ್ಲರೂ ಕೂಡ ಒಂದು ನಿರ್ಧಾರಕ್ಕೆ ಬರಬೇಕು. ಬೆಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಾವೇರಿ ನೀರನ್ನು ಬೆಂಗಳೂರಿಗೆ ತರುವುದಕ್ಕೆ ಬಹಳವಾಗಿ ಶ್ರಮಿಸಿದವರು ಉನ್ನತ ಇಂಡಿನಿಯರ್ ಆದಂಥಶ್ರೀ ಐ.ಎಂ ಮುಗ್ದಂರವರು. ಕಾವೇರಿ ನೀರು ಬೆಂಗಳೂರಿಗೆ ಬರುವುದಕ್ಕೆ ಬಹಳಷ್ಟು ಪ್ರಯತ್ನ ಮಾಡಿದ್ದಾರೆ. ಅವರ ಹೆಸರು ಬೆಂಗಳೂರು ನಗರದಲ್ಲಿ ಇಡುವುದಕ್ಕೆ ನಮ್ಮ ನಗರಪಾಲಿಕೆಯವರು ತಯಾರಿಲ್ಲ ಸ್ವಾಮಿ ನಮ್ಮ ಬೆಂಗಳೂರು ನಗರದಲ್ಲಿ ಕಂಠೀರವ ಕ್ರೀಡಾಂಗಣದಲ್ಲಿ ಪಕ್ಕದಲ್ಲೆ ಬೆಂಗಳೂರಿಗೆ ಮತ್ತು ರಾಜ್ಯಕ್ಕೆ ಬೀರನ್ನು ಸರಬರಾಜು ಮಾಡತಕ್ಕ ದೊಡ್ಡ ಕಾರ್ಖಾನೆಯೊಂದಿದೆ ಅದರ ಮಾಲೀಕರು ವಿಠ್ಠಲಮಲ್ಯ ಎಂದು. ಬೆಂಗಳೂರು ನಗರದ ಹೆಸರಿಡುವಾಗ ರಸ್ತೆಗೆ ಕುಡಿಯುವ ನೀರನ್ನು ತರುವುದಕ್ಕೆ ಕಷ್ಟಪಟ್ಟಂಥ ಯಾರೇ ಒಬ್ಬ ಇಂಜಿನಿಯರ್‌ಗಳ ಹೆಸರನ್ನು ಇಟ್ಟಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಆದರೆ ಅವರ ಹೆಸರನ್ನು ಇಡುವುದಕ್ಕೆ ಬೆಂಗಳೂರು ನಗರಸಭೆಯವರು ಗಮನಹರಿಸಲಿಲ್ಲ. ಇಂಗ್ಲೀಷರು ಗ್ರ್ಯಾಂಟ್ ರೋಡ್ ಎಂದು ಏನು ಹೆಸರಿಟ್ಟಿದ್ದರು ಆ ರೋಡಿಗೆ ವಿಠ್ಠಲ ಮಲ್ಯ ರಸ್ತೆ ಎಂದು ಹೆಸರಿಟ್ಟಿದ್ದಾರೆ ತಾವು ಯಾವಾಗಲಾದರೂ ಆ ಕಡೆ ಹೋದಾಗ ನೋಡಿ ಅವರ ಸೇವೆ ಏನು?

ಶ್ರೀ ಸಿ.ಬೈರೇಗೌಡ : ವಿಠ್ಠಲ ಮಲ್ಯ ಎಂದರೆ ಅವರು ಯಾರು?

ಶ್ರೀವಾಟಾಳ್ ನಾಗರಾಜ್ : ಅವರು ಯಾರು ಎಂದು ಇನ್ನೂ ನನಗೆ ಗೊತ್ತಾಗುತ್ತಿಲ್ಲ ಅವರ ಹೆಸರನ್ನು ಆ ರಸ್ತೆಗೆ ನಾಮಕರಣ ಮಾಡತಕ್ಕ ಉದ್ದೇಶವಾದರೂ ಏನಿತ್ತು? ಅದರ ಪಕ್ಕದಲ್ಲೇ ಮದ್ಯವನ್ನು ತಯಾರು ಮಾಡತಕ್ಕ ಕಾರ್ಖಾನೆಗೆ ಸರ್ಕಾರದವರು ಜಾಗವನ್ನು ಕೊಟ್ಟಿದ್ದಾರೆ. ಇಲ್ಲಿ ಉದ್ಯಾನವನವನ್ನು ನೋಡಿಕೊಂಡು ಹೋಗಬೈಕು ಇಲ್ಲಿ ಗಿಡಗಳನ್ನು ಬೆಳೆಸಬೇಕೆಂದು ಹೇಳುವ ನೆಪದಲ್ಲಿ ಈ ಒಂದು ಜಾಗವನ್ನು ಅವರಿಗೆ ಕೊಟ್ಟಿದ್ದಾರೆ. ಇದನ್ನು ತಾವು ನೋಡಬಹುದು.

ಶ್ರೀ ಸಿ ಬೈರೇಗೌಡ : ಇತ್ತೀಚೆಗೆ ಅಲ್ಲಿ ಒಂದು ಬೋರ್ಡ್ ನೋಡಿದ್ದೀರಾ? ಓದಿರುವುದು ನನಪಿದೆ. ನಾನೇ ಒಂದು ದಿವಸ ಮಾನ್ಯ ಸ್ನೇಹಿತರಾದ ವಾಟಾಳ್ ನಾಗರಾಜ್‌ರವರಿಗೆ ಹೇಳಿದೆ. ಮೊದಲು ಅಲ್ಲಿ ಮೂಲೆಯಲ್ಲಿ ಒಂದು ದೊಡ್ಡ ಆಲದ ಮರ ಇತ್ತು ನಾನು ಕಾಲೇಜಿನಲ್ಲಿ ಓದಿತ್ತಿದ್ದಾಗ ನೋಡುತ್ತಿದ್ದೆ. ಇವತ್ತು ಅಲ್ಲಿ ಆಲದ ಮರ ಇಲ್ಲ ಆ ಜಾಗದಲ್ಲಿ ಈಗ ಪ್ರಾಪರ್ಟಿ ಆಫ್ ಯುನೈಟೆಡ್ ಬ್ರ್ಯೂಯರೀಸ್ ಲಿಮಿಟೆಡ್ ಎಂದು ಒಂದು ಬೋರ್ಡ್‌ನ್ನು ಕಾಣುತ್ತಿದ್ದೇವೆ ರಾತ್ರೋ ರಾತ್ರಿ ಇದ್ದಕ್ಕಿದ್ದ ಹಾಗೆ ಒಂದು ಬೋರ್ಡ್ ಹೋಗಿ ಬಿಡುತ್ತದೆ ಒಂದು ಮರಹೋಗಿ ಬಿಡುತ್ತದೆ ಮತ್ತೊಂದು ಬೋರ್ಡ್ ಬಂದು ಬಿಡುತ್ತದೆ ಇದೆಲ್ಲ ನಡೆಯುತ್ತಿದೆ.

ಶ್ರೀ ಕೆ.ಜೆ. ಜಾರ್ಜ್ : ವಾಟಾಳ್ ನಾಗರಾಜ್‌ನವರೆ ಇದು ಯಾರ ಕಾಲದಲ್ಲಿ ಕೊಟ್ಟಿದ್ದು ಎಂಬುದನ್ನು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಕಾಲದಲ್ಲಿ ಏನು ಮಾಡಿದಿರಿ ಎನ್ನುವುದನ್ನು ಆಮೇಲೆ ನಾನು ಹೇಳುತ್ತೇನೆ ಈಗ ಯಾರ ಕಾಲದಲ್ಲಿ ಕೊಟ್ಟಿದ್ದು ಎಂದು ನಾನು ಹೇಳುತ್ತಿಲ್ಲ ಯಾರ ಕಾಲದಲ್ಲಿ ಆದರೂ ಅದು ಅನ್ಯಾಯವೇ ಮಾನ್ಯ ಬಂಗಾರಪ್ಪನವರ

ಸರ್ಕಾರ ವಿಠ್ಠಲ ಮಲ್ಯರವರಿಗೆ ಕೊಟ್ಟಿದ್ದು ಎಂದು ಬರೆಯುವುದಕ್ಕಾಗುತ್ತದೆಯೇ? ನಾನು ಅದನ್ನು ಹೇಳುತ್ತಿಲ್ಲ ಆ ಪಕ್ಕದ ಜಾಗವನ್ನು ಇವತ್ತು ಬಹಿರಂಗವಾಗಿ ಹರಾಜು ಹಾಕಿದರೂ ಸುಮಾರು 5 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹೋಗುತ್ತದೆ ಇಂಥ ಜಾಗವನ್ನು ಯು.ಬಿ. ಡಿಸ್ಟಿಲರಿಯವರಿಗೆ ಮುಫತ್ತಾಗಿ ಕೊಟ್ಟಿಬಿಟ್ಟಿದ್ದಾರೆ ಸುಮ್ಮನೆ ಇದನ್ನು ನೋಡಿಕೊಳ್ಳಿ ಎಂದು ಕೊಟ್ಟಿದ್ದಾರೆ ಮೊದಲು ಅಲ್ಲಿ ಒಂದು ನಾಮಫಲಕ ಇತ್ತು. ಈಗ ಅದನ್ನು ತೆಗೆದು ತಮ್ಮ ಸ್ವಂತ ಆಸ್ತಿ ಎನ್ನತಕ್ಕ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ಈರೀತಿ ಮಾಡುತ್ತಾ ಹೋದರೆ ನಾಳೆ ಈ ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮ ವಹಿಸಿದವರು ತ್ಯಾಗ ಮಾಡಿದವರು ದುಡಿದವರು ಯಾರಿದ್ದಾರೆ ಅವರ ಹೆಸರನ್ನು ಯಾರೂ ಕೂಡ ಇಡುವ ಪರಿಸ್ಥಿತಿ ಬರುವುದಿಲ್ಲ ಅವರ ಚರಿತ್ರೆಗಳು ಹೆಸರನ್ನು ಇಡಿ ಏಕೆಂದರೆ ಒಂದೊಂದು ವರ್ಷ ಅವರು ಮೇಯರ್‌ಗಳಾಗಿ ದುಡಿದಿದ್ದಾರೆ. ಕನಿಷ್ಟ ಸೇವೆಯನ್ನು ಯಾರು ಮಾಡಿದ್ದಾರೆ ಅವರ ಹೆಸರನ್ನು ಇಡಿ ಅವರ ಬಗ್ಗೆ ನನ್ನ ವಿರೋಧ ಇಲ್ಲ

ಇನ್ನೊಂದು ವಿಚಾರ ಏನೆಂದರೆ ನಾನು ಬಹಳ ವರ್ಷಗಳಿಂದ ಹೇಳುತ್ತಲೇ ಬಂದಿದ್ದೇನೆ ನಮ್ಮ ವಿಧಾನ ಸೌಧದ ಮುಂದಿರತಕ್ಕ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಅವರನ್ನು ಹೋಲುತ್ತಿಲ್ಲ. ಆದ್ದರಿಂದ ಈ ಪ್ರತಿಮೆಯನ್ನು ಬದಲಾಯಿಸಬೇಕೆಂದು ನಾನು ಹೇಳುತ್ತಲೇ ಇದ್ದೇನೆ ಮಾಜಿ ಮೇಯರ್‌ಗಳಾಗಿ ಶ್ರೀ ಅನಂತಕೃಷ್ಣರವರು ಜೆ. ಲಿಂಗಯ್ಯನವರೂ ವಿ.ಆರ್.ನಾಯ್ಡುರವರು ಇನ್ನೂ ಅನೇಕರು ಇದ್ದಾರೆ.

ಅಧ್ಯಕ್ಷರು : ಬೇರೆ ಇನ್ನೊಂದು ಪ್ರತಿಮೆಯನ್ನು ಮಾಡುತ್ತಿದ್ದಾರೆ ಅದು ಬಂದಮೇಲೆ ಇದನ್ನು ಬದಲಾವಣೆ ಮಾಡುತ್ತಾರೆ.

ಶ್ರೀ ಸಿ.ಬೈರೇಗೌಡ : ಸ್ವಾಮಿ ನನಗೂ ಕೂಡ ನೋವಾಗುತ್ತಿದೆ. ಈಗಿರತಕ್ಕ ಪ್ರತಿಮೆ ಹನುಮಂತಯ್ಯನವರನ್ನು ಹೋಲುವುದಿಲ್ಲ. ಇದು ಹನುಮಂತನನ್ನು ಹೋಲುತ್ತಿದೆ. ಮೊದಲು ಇದನ್ನು ತೆಗೆಸಲಿ ಹನುಮಂತಯ್ಯನವರ ಪ್ರತಿಮೆ ಇರಲಿ, ಆದರೆ ಈಗೀರುವ ಹನುಮಂತನ ಪ್ರತಿಮೆಯನ್ನು ತಕ್ಷಣ ತೆಗೆಸಲಿ.

ಅಧ್ಯಕ್ಷರು : ಇನ್ನೊಂದು ಪ್ರತಿಮೆ ಬಂದ ಕೂಡಲೇ ಈ ಪ್ರತಿಮೆಯನ್ನು ತೆಗೆದು ಇದರ ಜಾಗದಲ್ಲಿ ಅದನ್ನು ಕೂರಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಕಳೆದ 2-3 ವರ್ಷದಿಂದಲೂ ಹೊಸ ಪ್ರತಿಮೆ ಬರುತ್ತದೆಂದು ಹೇಳುತ್ತಲೇ ಇದ್ದಾರೆ. ಅದು ಬರಲಿಲ್ಲ. ಈಗಲಾದರೂ ಬಂದರೆ ಸಂತೋಷ. ಹೊಸ ಪ್ರತಿಮೆ ಬರುತ್ತದೆಂದು ನಿಮ್ಮ ತಮ್ಮಿಂದ ಭರವಸೆ ಬಂದರೆ ನಾನು ಸಂತೋಷ ಪಡುತ್ತೇನೆ ಏಕೆಂದರೆ ಕಳೆದ 2-3 ವರ್ಷದಿಂದಲೂ ಹೇಳುತ್ತಲೇ ಬಂದಿದ್ದಾರೆ.

ಅಧ್ಯಕ್ಷರು : ಈಗ ಮಾಡುತ್ತಿರುವ ಪ್ರತಿಮೆ ಆ ಪ್ರತಿಮೆಯದರೂ ಕೂಡ ಮಾನ್ಯ ಹನುಮಂತಯ್ಯನವರ ಹೋಲಿಕೆ ಬರಲಿ ಎಂದು ಆಶೆ ಮಾಡೋಣ

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಸ್ವಾಮಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ ಹನುಮಂತಯ್ಯನವರನ್ನು ಬಲ್ಲವರು ಅವರ ಚಿತ್ರವನ್ನು ಅವರ ವ್ಯಕ್ತಿತ್ವವನ್ನು ಹೇಳತಕ್ಕಂಥ ಪ್ರತಿಮೆ ಆಗುತ್ತಿದೆಯೇ ಎಂದು ಯಾವಾದರೂ ಹೋಗಿ ಮತ್ತೆ ನೋಡಿಕೊಂಡು ಬಂದಿದ್ದಾರೊ ಇಲ್ಲವೂ ಗೊತ್ತಿಲ್ಲ ಈಗ ಮತ್ತೆ ಅದೊಂದು ಪ್ರತಿಮೆಯನ್ನು ತರುವುದು ಇದಕ್ಕಿಂತ ಇನ್ನೂ ತೀರ ಕೆಳಮಟ್ಟದಲ್ಲಿ ಇರುವುದಾದರೆ ಏನು ಪ್ರಯೋಜನ ಆ ಪ್ರತಿಮೆಯನ್ನು ತಾವು ಯಾರಾದರೂ ಹೋಗಿ ನೋಡಿದ್ದೀರಾ?

ಈಗ ಪ್ರತಿಮೆ ತಯಾರಾಗುತ್ತಿರುವ ಕಡೆ ಯಾರಾದರೂ ಹೋಗಿ ನೋಡಿಕೊಂಡು ಬಂದಿರುತ್ತೀರೋ? ಯಾರು ಹೋಗಿಲ್ಲ ಹೋಗಲಿ ಈಗಲಾದರೂ ಯಾರನ್ನಾದರೂ ಕಳುಹಿಸಿದ್ದಿರೋ ನೋಡಿಕೊಂಡು ಬನ್ನಿ ಯಾವರೀತಿ ಯಾವ ಆಕಾರವಿದೆ ಎಂದು ಎಲ್ಲಿ ಪ್ರತಿಮೆ ತಯಾರಾಗುತ್ತಿದೆ ಎಂದು ಹೇಳಿ ಅಲ್ಲಿಗೆ ನಮ್ಮನ್ನಾದರೂ ಕಳುಹಿಸಿ ನಾವಾದರೂ ಹೋಗಿ 4-5 ಜನರ ಒಂದು ಟೀಮು ಹೋಗಿ ಬರುತ್ತೇವೆ. ಕಳುಹಿಸಿ ನಾವಾದರೂ ಹೋಗಿ ಬರುತ್ತೇವೆ ಏತಕ್ಕೆಂದರೆ ಮತ್ತೆ ಮಾಡಬೇಕಾಗುತ್ತದೆ ಇಲ್ಲವೇ ಎಂದು ಹೇಳುತ್ತೇವೆ. ಆ ಪ್ರತಿಮೆಯನ್ನು ಕಂಡು ಮತ್ತೆ ಅದು ಸರಿಯಿಲ್ಲವೆಂದು ಹೇಳುವುದು ಬೇಡ. ಅದರ ಮುಂಚಿತವಾಗಿ ಸರ್ಕಾರ ಒಂದು ಒಳ್ಳೆಯ ಪ್ರತಿಮೆಯನ್ನು ಮಾಡಬೇಕೆಂದು ಉದ್ದೇಶವಿರುವಾಗ ಈ ಉದ್ದೇಶಕ್ಕೆ ಭಂಗ ಬಾರದಂಥ ರೀತಿಯಲ್ಲಿ ತಾವು ಒಂದು ವ್ಯವಸ್ಥೆ ಮಾಡಿ ನಾವು ಸಲಹೆಯನ್ನು ಮಾಡುತ್ತಿದ್ದೇವೆ.

ಸನ್ಮಾನ್ಯ ಅಧ್ಯಕ್ಷರೇ ಇತ್ತಿಚೆಗೆ ಅಂದರೆ 17-4-1991ರಲ್ಲಿ ಬೆಂಗಳೂರು ನಗರದ ಆಯುಕ್ತರಿಗೆ ತಮಿಳು ಸಂಘದವರು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ ತಮಿಳು ಕರಿ ಶ್ರೀ ತಿರುವಳ್ವಾರ್ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದು ಅರ್ಜಿಯನ್ನು ಕೊಡುವುದು ಅರ್ಜಿಯನ್ನು ಕೊಟ್ಟಿದ್ದು ಎಷ್ಟನೇ ತಾರೀಖು ಎಂದರೆ 17-4-1991ರಲ್ಲಿ 25-4-91 ರಲ್ಲಿ ಅನುಮತಿಯನ್ನು ಕೊಟ್ಟೇಬಿಡುತ್ತಾರೆ. ನೀವು ಪ್ರತಿಮೆಯನ್ನು ಸ್ಥಾಪನೆ ಮಾಡಬಹುದು ಅದರಲ್ಲಿ ಏನು ಅನುಮಾನ ಪಡಬೇಕಾಗಿಲ್ಲ? ನೀವು ಎಲ್ಲಿ ಬೇಕಾದರು ಪ್ರತಿಮೆಯನ್ನು ಇಡಬಹುದು ಎಂದು ಕೊಡುತ್ತಾರೆ. 11 ತಿಂಗಳ ಒಳಗೆ ನಾವು ಅನುಮತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ ಇದು ಬಹಳ ಚೆನ್ನಾಗಿದೆ. ಪ್ರತಿಮೆ ಇರತಕ್ಕಂಥದ್ದಕ್ಕೆ ಅವಧಿ 11ತಿಂಗಳು ಅದರೊಳಗೆ ಪ್ರತಿಮೆಯನ್ನು ಇಡಬಹುದೆಂದು ಅನುಮತಿ ಕೊಡುತ್ತಾರೆ.

ಶ್ರೀ ಸಿ.ಬೈರೇಗೌಡ : 11 ತಿಂಗಳೊಳಗಾಗಿ ಆ ಪ್ರತಿಮೆಯನ್ನು ಅಲ್ಲಿ ಎರೆಕ್ಟ್ ಮಾಡಬೇಕೆಂದು ಇರಬಹುದು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ವಾದ ಅದು ಇರಲಿ. ಮಾನ್ಯ ಅಧ್ಯಕ್ಷರೆ ನಾನು ತಮಗೆ ಹೇಳುತ್ತಿದ್ದೇನೆ ಈಗ ಮಹಾನಗರಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳು ಸದಸ್ಯರು ಇದ್ದಾರೆ ಈ ವಿಷಯವನ್ನು ತರಾತುರಿಯಿಂದ ಯಾವ ಸಭೆಗೂ ತರದೆ ಸಭೆಯಲ್ಲಿ ನಿರ್ಣಯವೂ ಆಗದೆ ಇದನ್ನು ಇಡಬಹುದೋ? ಇದಕ್ಕೆ ಅಧಿಕಾರವಿದೆಯೋ? ಮಾನ್ಯ ಅನಂತಕೃಷ್ಣ ರವರು ಇದರ ಬಗ್ಗ ಬೆಳಕನ್ನು ಚೆಲ್ಲಬೇಕು ಹನ್ನೊಂದು ತಿಂಗಳು ಟೈಮ್ ಇದೆಯೆಂದು ಅಲ್ಲಿ ಹನ್ನೊಂದು ತಿಂಗಳು ಅವರು ಅಧಿಕಾರದಲ್ಲಿರುತ್ತೇವೆಂದು ಹೇಳಿ ಇಂಥ ಪರಿಣಾಮಕಾರಿಯಾದಂಥ ಗಂಭೀರವಾದಂಥ ವಿಚಾರದ ಬಗ್ಗೆ ಗಮನಹರಿಸುವುದಕ್ಕೆ ಆ ಅಧಿಕಾರಿಗಳಿಗೆ ಸ್ವಾತಂತ್ರವನ್ನು ಕೊಟ್ಟವರು ಯಾರು? ಅಧಿಕಾರಿ ಈ ಬಗ್ಗೆ ಸರ್ಕಾರವನ್ನು ಕೇಳಿದ್ದನ್ನೇ ಪ್ರಶ್ನೆ ನಾಳೆ ರಾಜ್ಯದಲ್ಲಿ ಏನು ಪರಿಸ್ಥಿತಿ ಬರಬಹುದು ಮತ್ತು ಬೆಂಗಳೂರು ನಗರದಲ್ಲಿ ಏನು ಪರಿಸ್ಥಿತಿ ಬರಬಹುದು ಇದಕ್ಕೆ ಪ್ರತಿಭಟನೆ ಇದೆಲ್ಲ ಯೋಜನೆ ಮಾಡಿ ಸರ್ಕಾರದವರ ಜೊತೆಯಲ್ಲಿ ಮಾತನಾಡಬೇಕು ತಾನೆ. ಇದರ ಬಗ್ಗೆ ನಿಮ್ಮ ಜೊತೆಯಲ್ಲಿ ಏನಾದರೂ ಮಾತನಾಡಿದ್ದಾರೆಯೇ?

ಸರ್ಕಾರದಿಂದ ಅನುಮತಿ ತೆಗೆದುಕೊಂಡಿರುತ್ತಾರೆಯೇ ಯಾವ ಕಾರಣದಿಂದ ಈ ಪ್ರತಿಮೆಯನ್ನು ಇಡುವುದಕ್ಕೆ ಆ ಅಧಿಕಾರಿಗೆ ಅಧಿಕಾರ ಸಿಕ್ಕಿತು ಎಂದು ಕೇಳಬೇಕಾಗಿದೆ. ಮತ್ತು ಇದೇ ಅಧಾರದ ಮೇಲೆ ಈ ಯಾವ ಸೂತ್ರಗಳನ್ನು ಅನುಸರಿಸಿಲ್ಲ ಎಂದು ಹೇಳಿ ಹೈಕೋರ್ಟಿಗೆ ಅರ್ಜಿಯನ್ನು ಸಲ್ಲಿಸಿ ಇದಕ್ಕೋಸ್ಕರವೇ ತಡೆ ಬಂದಿರುವುದು. ಆದರೆ ತಮಗೆ ನಾನು ಹೇಳುತ್ತಿದ್ದೇನೆ ಇಂಥದ್ದನ್ನು ಮಾಡುವಾಗ ಪ್ರತಿಮೆಗಳನ್ನು

ಹಾಕುವಾಗ ಯಾವ ಆಧಾರ ಸೂತ್ರಗಳನ್ನು ನೀವು ಅಳವಡಿಸುತ್ತೀರಿ. ನಗರಸಭೆಯಲ್ಲಿ ಈ ನಿರ್ಣಯ ಬರಬೇಕು ಆದರೆ ನಗರ ಸಭೆಯಲ್ಲಿ ನಿರ್ಣಯ ಬಂದಿಲ್ಲ ನಗರ ಸಭೆಯಲ್ಲಿ ಚರ್ಚೆಯಾಗಿಲ್ಲ. ನಗರಸಭೆಯಲ್ಲಿ ಚರ್ಚೆಯಾದಮೇಲೆ ನಿರ್ಣಯ ಒಪ್ಪಿಗೆಯಾಗಿಲ್ಲ. ಒಪ್ಪಿಗೆಯಾದ ನಿರ್ಣಯ ಸರ್ಕಾರಕ್ಕೆ ಬಂದಿಲ್ಲ. ಸರ್ಕಾರಕ್ಕೆ ಬಂದಲ್ಲಿ ಸರ್ಕಾರ ಅದಕ್ಕೆ ಒಪ್ಪಿಗೆಯನ್ನು ನೀಡಿ ಮತ್ತೆ ಮಹಾನಗರಪಾಲಿಕೆಗೆ ತಿಳಿಸಬೇಕು. ಇದು ಯಾವ ಒಂದು ಸೂತ್ರವನ್ನು ಅನುಸರಿಸದೇ ನೀವು ಯಾರದೋ ಒತ್ತಡಕ್ಕೆ ಮಣಿದು ಇಂಥ ಪ್ರತಿಮೆಗಳನ್ನು ಹಾಕುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ ನೀವು ಯಾರ ಒತ್ತಡಕ್ಕೆ ಮಣಿದಿದ್ದೀರಿ. ದಯವಿಟ್ಟು ಅದು ಬಯಲಿಗೆ ಬರಬೇಕು. ನನಗೇನು ಯಾವ ಪ್ರತಿಮೆಯ ಬಗ್ಗೆಯೂ ದ್ವೇಷವಿಲ್ಲ ಯಾವ ಪ್ರತಿಮೆಯ ಬಗ್ಗೆಯೂ ನಾನು ವೈಯಕ್ತಿಕವಾಗಿ ಮಾತನಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಕಾರ್ಪೋರೇಷನ್‌ನವರು ಒಂದು ನಿರ್ಣಯ ಮಾಡಿದ್ದಾರೆ ಈಗ ಅಲ್ಲಿ ಕಾರ್ಪೋರೇಷನ್ ಆಕ್ಟ್ ಪ್ರಕಾರ ಶಾಸಕರು ಕೂಡ ಭಾಗವಹಿಸುವುದಕ್ಕೆ ಅವಕಾಶ ಇದೆ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಿದ್ದ ಹಾಗೆ ಇಲ್ಲ ಆ ಅವಕಾಶವನ್ನು ದಯವಿಟ್ಟು ಕೊಡಿ ಅದನ್ನು ಕೊಟ್ಟಿದ್ದರೆ ಇದು ಬರುತ್ತಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಸ್ಥಳೀಯ ಚುನಾಯಿತ ಸಭೆ ಈ ವಿಷಯದಲ್ಲಿ ಒಂದುವೇಳೆ ಕಾರ್ಪೋರೇಷನ್ ಕಮಿಷನರ್ ತಮ್ಮ ಅಧಿಕಾರ ಮೀರಿ ತೀರ್ಮಾನ ಮಾಡಿದ್ದರೆ ಅಥವಾ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದರೆ ತಕ್ಷಣ ಆ ಚುನಾಯಿತಿ ಪ್ರತಿನಿದಿ. ಸಭೆಯಲ್ಲಿ ಏತಕ್ಕೆ ಚರ್ಚೆ ಮಾಡಿ ತೀರ್ಮಾನಕ್ಕೆ ಬರುವಂತಹ ಅವಕಾಶ ಮಾಡಿಕೊಡಬಾರದು. ಅದಕ್ಕೆ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಹೇಳುತ್ತೇನೆ ಇಂಥ ಸಂದರ್ಭದಲ್ಲಿ ಅವರಿಗೆ ಇರತಕ್ಕ ಹಕ್ಕನ್ನು ನಾವು ಮೊಟಕುಗೊಳಿಸಿದಂತೆ ಆಗುವುದಿಲ್ಲವೇ? ಅವರು ಕಾರ್ಪೋರೇಷನ್ ಸದಸ್ಯರಾಗಿ ಕೆಲಸ ಮಾಡಿದ್ದಾರೆ ಮತ್ತು ಚುನಾಯಿತ ಶಾಸಕರಾಗಿ ಕೆಲಸ ಮಾಡಿದ್ದಾರೆ. ಆದುದರಿಂದ ಅವರಿಗೆ ಅನುಭವ ಇದೆ ಎಲ್ಲಾ ಗೊತ್ತಿದೆ.

ಅಧ್ಯಕ್ಷರು : ಅವರು ಕೆಲವು ಕಾಲ ಕಬ್ಬನ್ ಪಾರ್ಕಿನಲ್ಲಿ ಮೇಯರ್ ಆಗಿಯೂ ಕೆಲಸ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀವು ಮೇಯರ್ ಮಾಡಿಸಲಿಲ್ಲ ಅದಕ್ಕೆ ಏನು ಮಾಡೋಣ. ಅದಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದರೆ ಒಳ್ಳೆಯದಿತ್ತು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ನಾನು ಕಾರ್ಪೋರೇಷನ್ ಸಭೆಯನ್ನು ಅಲ್ಲಗಳೆಯುತ್ತಿಲ್ಲ. ಆ ವಿಷಯ ನಗರ ಸಭೆಯಲ್ಲಿ ಬರಬೇಕು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ನಿರ್ಣಯ ಆಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಆ ವಿಷಯವನ್ನು ಕಾರ್ಪೋರೇಷನ್ ಸಭೆಯಲ್ಲಿ ರೇಸ್ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಗೆ ಕಾರ್ಪೋರೇಷನ್ ಸಬೆಗೆ ಹೋಗಿ ಮಾತನಾಡುವುದಕ್ಕಾಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಕಾರ್ಪೊರೇಷನ್ ತಮಗೆ ಇರತಕ್ಕ ಅಧಿಕಾರಿ ಬಲದಿಂದ ಈ ರೀತಿ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಒಂದು ವೇಳೆ ಆ ರೀತಿ ಮಾಡುವ ಸನ್ನಿವೇಶ ಬಂದರೆ ಆಗ ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಮುಂದಿನ ಭವಿಷ್ಯದ ಬಗ್ಗೆ ಏನು ಮಾಡೋಣ ಎಂದರೆ ಹೇಳುವುದಕ್ಕಾಗುವುದಿಲ್ಲ ಬಾಂಬ್ ಬೀಳುತ್ತದೆ ಏನು ಮಾಡೋಣ ಅಂದರೆ ಏನೂ ಮಾಡುವುದಕ್ಕಾಗುವುದಿಲ್ಲ. ಇದು ನಗರಸಭೆಯಲ್ಲಿ ಚರ್ಚೆಗೆ ಬರಲಿ. ಅಲ್ಲಿ ಚರ್ಚೆ ಮಾಡಿ ನಂತರ ನಿರ್ಣಯ ಮಾಡಿ ಆ ನಿರ್ಣಯ ಸರ್ಕಾರದ ಮುಂದೆ ಬರತಕ್ಕದ್ದು ವಿಧಾನ. ಈ ಎಲ್ಲಾ ವಿಧ ವಿಧಾನಗಳನ್ನು ಗಾಳಿಗೆ ತೂರಿ ಈ ಒಂದು ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ. ಯಾರದೋ ಒತ್ತಡಕ್ಕೆ ಮಣಿದು ಈ ಒಂದು ಕೆಲಸಕ್ಕೆ ಕೈಹಾಕಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್ : ಇದೇ ವಿಚಾರವನ್ನು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಲಾಗಿದೆ. ಹೈಕೋರ್ಟಿನವರು ಸ್ಟೇ ಕೊಟ್ಟಿದ್ದಾರೆ ಇನ್ನೂ ಆ ಸ್ಟಾಚುವನ್ನು ಎರೆಕ್ಟ್ ಮಾಡಲಿಲ್ಲ. ನಾನು ದಯವಿಟ್ಟು ಸನ್ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಾವು ಹೈಕೋರ್ಟ್ ಜಡ್ಜ್‌ಮೆಂಟ್ ಬರುವವರೆಗೆ ವೆಯಿಟ್ ಮಾಡೋಣ ಹೈಕೋರ್ಟ್ ಜಡ್ಜ್‌ಮೆಂಟ್ ಬಂದಮೇಲೆ ಅದರ ವಿಚಾರವನ್ನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅವರ ಬಗ್ಗೆ ನನಗೆ ನಂಬಿಕೆ ಇದೆ ಅದನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಇದೇ ಸಂದರ್ಭದಲ್ಲಿ ನಮ್ಮ ಕವಿಗಳಾದ ರನ್ನನ ಪಂಪ, ಅಧಿ ಕವಿಗಳು, ಇತ್ತೀಚಿನ ನವ್ಯ ಕವಿಗಳು, ರಾಷ್ಟ್ರ ಕವಿಗಳು, ಪದ್ಮ ವಿಭೂಷಣ ಕುವೆಂಪು ಮಾಸ್ತಿ ದ.ರಾ.ಬೇಂದ್ರೆ, ಡಿ.ವಿ.ಜಿ. ಬಸವೇಶ್ವರ, ಕಿತ್ತೂರು ರಾಣಿ ಚೆನ್ನಮ್ಮ ಇವರಲ್ಲಿ ಯಾರ ಪ್ರತಿಮೆಗಳನ್ನಾದರೂ ತಮಿಳ್ನಾಡಿನಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ಹಾಕತಕ್ಕ ಸೌಜನ್ಯವಾದರೂ ಬೇಡವೇ? ನಮ್ಮ ಕರ್ನಾಟಕ ಯಾರು ಬೇಕಾದರೂ ಬಂದು ಹೋಗತಕ್ಕ ಬಾಡಿಗೆ ಮನೆಯೇನು? ಇಲ್ಲಿ ಯಾರ ಪ್ರತಿಮೆ ಬೇಕಾದರೂ ಇರಬಹುದೇ? ಯಾರು ಬೇಕಾದರೂ ಬರಬಹುದೇ ಇದಕ್ಕೆ ಬೆಲೆ ನೀತಿ ನಿಯಮ ಏನೂ ಬೇಡವೇ? ರಾಜ್ಯದ ಪರಿಸ್ಥಿತಿಯನ್ನು ಏನು ಮಾಡಬೇಕೆಂದು ಹೊರಟಿದ್ದೀರಿ? ತಮಿಳ್ನಾಡಿನಲ್ಲಿ ಎಲ್ಲಾದರೂ ಕರ್ನಾಟಕದ ಕವಿಗಳ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆಯೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಮಂತ್ರಿಯವರು ನಮ್ಮವರೇ ಇದ್ದರೆಂದು ಆರಾಮವಾಗಿ ಕುಳಿತುಕೊಳ್ಳುವುದು ಒಳ್ಳೆಯದು

ಶ್ರೀ ಸಿ. ಬೈರೇಗೌಡ : ನನಗೆ ಭಯ ಏನಾಗುತ್ತಿದೆ ಎಂದರೆ ಇದೇ ರೀತಿ ಮುಂದುವರಿದರೆ ನಮ್ಮ ಗತಿ ಏನು? ಬೆಂಗಳೂರಿನಲ್ಲಿ ಶಿವರಾಸನ್ ಸತ್ತುದಕ್ಕೆ ಕೆಲವುಕಡೆ ಶೋಕಸಭೆಗಳನ್ನು ನಡೆಸುತ್ತಿದ್ದಾರೆ ಎಂದು ಸುದ್ದಿಯನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ನಾಳೆ ದಿವಸ ಅವನ ಪ್ರತಿಮೆಯನ್ನು ಇಲ್ಲಿ ಹಾಕಬೇಕೆಂದು ಬೇಡಿಕೆ ಬಂದರೂ ಬರಬಹದು.

ಶ್ರೀ ಕೆ.ಜೆ.ಜಾರ್ಜ್ : ದಯವಿಟ್ಟು ತಿರುವಳ್ಳವರ್‌ಗೂ ಮತ್ತು ಶಿವರಾಸನ್‌ಗೂ ಹೋಲಿಸಬೇಡಿ.

ಶ್ರೀ ಸಿ ಬೈರೇಗೌಡ : ತಿರುವಳ್ಳುವರ್ ಅವರು ಯಾವುದೇ ಭಾಷೆ ಸಾಹಿತ್ಯ ರಚಿಸಲಿ ಅವರ ಪ್ರತಿಮೆಯನ್ನು ಇಲ್ಲಿ ಹಾಕುವುದೇ? ಷೇಕ್ಸ್‌ಫಿಯರ್ ಬಗ್ಗೆ ಯಾರಿಗೆ

ಗೌರವವಿಲ್ಲ? ಆದರೆ ನಮ್ಮ ಕವಿಗಳಾಗಿರತಕ್ಕ ಆದಿಕವಿ ಪಂಪ, ಶಕ್ತಿ ರನ್ನ ಇದ್ದಾನೆ. ಅವರ ಹೆಸರಾದರೂ ನಿಮಗೆ ಜ್ಞಾಪಕ ಇದೆಯೇ?

ಶ್ರೀ ಕೆ.ಜೆ.ಜಾರ್ಜ್ : ಬೈರೇಗೌಡರೆ ಒಂದು ವಿಚಾರ ಹೇಳುತ್ತೇನೆ. ನಿಜವಾಗಿ ಈ ವಿಚಾರ ಬಂದಾಗ ಕಾರ್ಪೋರೇಷನ್ ನವರ ಜೊತೆ ನಾನು ಚರ್ಚೆ ಮಾಡಿದ್ದೇನೆ ನಮ್ಮ ಆದಿ ಕವಿಗಳ ಪ್ರತಿಮೆಗಳನ್ನು ನಿಜವಾಗಿ ಹಾಕಬೇಕು. ವಾಟಾಳ್ ನಾಗರಾಜ್‌ರವರಾಗಲಿ ಬೈಲೇಗೌಡರಾಗಲೀ ನಮ್ಮ ಸದಸ್ಯರಾಗಲೀ ಎಲ್ಲಿ ಸಲಹೆ ಮಾಡುತ್ತಾರೋ ಅಲ್ಲಿ ಗವರ್ನಮೆಂಟ್ ಖರ್ಚಿನಲ್ಲಿ ಹಾಕುವುದಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕದಲ್ಲಿ ನೀವು ಹಾಕುವುದಕ್ಕೆ ನನಗೆ...

ಅಧ್ಯಕ್ಷರು : ಈಗ ಒಂದೂವರೆ ಗಂಟೆಯಾಯಿತು. ಖಾಸಗಿ ಕಲಾಪಗಳನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ನಾನು ಮುಗಿಸುತ್ತೇನೆ. ನಾನು ಅನೇಕ ರಾಜ್ಯಗಳಲ್ಲಿ ನೋಡಿದ್ದೇನೆ ನಮ್ಮ ಕವಿಗಳಾಗಲೀ ಸಾಹಿತಿಗಳಾಗಲೀ ಕಲಾವಿದರಾಗಲೀ ಒಬ್ಬರ ಪ್ರತಿಮೆ ಇಲ್ಲ, ಒಂದು ರಸ್ತೆಗಾದರೂ ಹೆಸರಿಲ್ಲ. ಕರ್ನಾಟಕದಲ್ಲಿ ಮಾತ್ರ ಎಲ್ಲರದ್ದೂ ಇದೆ. ಬೇರೆ ರಾಜ್ಯದಲ್ಲಿ ಮಾತ್ರ ನಮ್ಮ ಕವಿಗಳಿಗೆ ಮನ್ನಣೆ ಕೊಡುವುದಿಲ್ಲ ನಮ್ಮ ರಾಜ್ಯದಲ್ಲಿ ಮಾತ್ರ ಎಲ್ಲಾ ಕವಿಗಳಿಗೆ ಮನ್ನಣೆ ಕೊಡುವುದು ಸಾಧ್ಯವಿಲ್ಲ.

ಶ್ರೀ ಕೆ.ಜೆ.ಜಾರ್ಜ್ : ಹೈದರಾಬಾದ್‌ನಲ್ಲಿ ವಿಶ್ವೇಶ್ವರಯ್ಯನವರ ಸ್ಟ್ಯಾಚೂ ಇದೆ.

ಶ್ರೀ ವಾಟಾಳ್ ನಾಗರಾಜ್ : ವಿಶ್ವೇಶ್ವರಯ್ಯನವರು ಇಡೀ ರಾಷ್ಟ್ರ ಮಟ್ಟದ ದೊಡ್ಡ ಇಂಜಿನಿಯರ್ ಆಗಿದ್ದರು. ಹೈದರಾಬಾದ್‌ಗೆ ವಿಶ್ವೇಶ್ವರಯ್ಯನವರು ಕೊಡುಗೆ ಇರುವುದರಿಂದ ಅವರ ಪ್ರತಿಮೆಯನ್ನು ಹಾಕಿದ್ದಾರೆ. ಅದೇನೂ ಧರ್ಮಕ್ಕೆ ಹಾಕಿಲ್ಲ. ತಮಿಳುನಾಡಿನಲ್ಲಿ ನಮ್ಮ ಒಬ್ಬ ಕವಿಯದು ತೋರಿಸಿ. ಆಂಧ್ರದಲ್ಲಿ ಹಾಕಿರುವುದನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಬಳ್ಳಾರಿ ರಾಘವ ಅವರದು.......

ಶ್ರೀ ವಾಟಾಳ್ ನಾಗರಾಜ್ : ಬಳ್ಳಾರಿ ರಾಘವ ಗೊತ್ತು. ಬಳ್ಳಾರಿಯಲ್ಲಿ ಅವರ ಸ್ಮಾರಕ ಇದೆ ನಾಟಕ ಮಂದಿರ ಇದೆ. ಅವರ ಮನೆತನದವರು ನನಗೆ ಬಹಳ ಬೇಕಾದವರು ನಾನು ನೋಡಿದ್ದೇನೆ. ಅವರ ವಕೀಲರು ನಿಮ್ಮ ನೆಂಟರು ಅದೆಲ್ಲಾ ನನಗೆ ಗೊತ್ತು. ಈ ರಾಜ್ಯದಲ್ಲಿ ಯಾರು ಎಲ್ಲಿ ಬೇಕಾದರೂ ಇರಬಹುದು. ತಾವು ನಾಳೆ ಬೆಳಗ್ಗೆ ತಮಿಳುನಾಡು ಮುಖ್ಯಮಂತ್ರಿಯವರಿಗೆ ಒಂದು ಕಾಗದ ಬರೆಯಿರಿ. ಈ ಪ್ರತಿಮೆಯ ಬಗ್ಗೆ ಇಲ್ಲಿ ಇಂಥ ಪರಿಸ್ಥಿತಿ ಉದ್ಭವವಾಗಿದೆ. ತಮಿಳುನಾಡಿನಲ್ಲಿ ನೀವು ನಮ್ಮ ಮಹಾಕವಿಗಳದು ಯಾರಾದರೂ ಒಬ್ಬರ ಪ್ರತಿಮೆ ಹಾಕುವುದಕ್ಕೆ ನಿರ್ಧಾರ ತೆಗೆದುಕೊಳ್ಳಿ. ಆಗ ನಿಮ್ಮ ಸಮಸ್ಯೆ ಬಗೆಹರಿಯುತ್ತದೆ. ರಾಷ್ಟ್ರಕವಿ ಕುವೆಂಪು ಅವರ ಒಂದು ಪ್ರತಿಮೆಯನ್ನು ತಾವು ಮೌಂಟ್ ರೋಡಿನಲ್ಲಿ ಹಾಕುವುದಕ್ಕೆ ಪ್ರಯತ್ನ ಪಡುತ್ತೀರಾ ಎಂದು ಕೇಳಿ. ಅವರಿಂದ ಉತ್ತರ ಬಂದಮೇಲೆ ನಮ್ಮಲ್ಲಿ ಯಾರ ಪ್ರತಿಮೆ ಹಾಕಬೇಕು ಎಂಬ ಬಗ್ಗೆ ನಾವು ಒಂದು ನಿರ್ಧಾರಕ್ಕೆ ಬರೋಣ.

ಶ್ರೀ ರಮಾನಾಥ ರೈ : ಕರ್ನಾಟಕದವರು ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರ ಫೋಟೋ ಇಟ್ಟುಕೊಂಡು ನೀವು ಪೂಜೆ ಮಾಡಿ.